ಸಂಪುಟ 01 । ಸಂಚಿಕೆ 113 । ಬುಧವಾರ 11 ಮಾರ್ಚ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ರದರ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

ವಿಶ್ವ ಪ್ಲಂಬಿಂಗ್ ದಿನ–World Plumbing Day

ವಿಶ್ವ ಪ್ಲಂಬಿಂಗ್ ದಿನವನ್ನು ಪ್ರತಿ ವರ್ಷ ಮಾರ್ಚ್ 11 ರಂದು ಆಚರಿಸಲಾಗುತ್ತದೆ. ಈ ದಿನವನ್ನು ಪ್ಲಂಬಿಂಗ್ ವ್ಯವಸ್ಥೆಗಳ ಮಹತ್ವ, ಸ್ವಚ್ಛ ಕುಡಿಯುವ ನೀರು, ಶುದ್ಧತೆ ಮತ್ತು ಸಾರ್ವಜನಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ. ಈ ದಿನವನ್ನು 2010ರಲ್ಲಿ ವರ್ಲ್ಡ್ ಪ್ಲಂಬಿಂಗ್ ಕೌನ್ಸಿಲ್ ಆರಂಭಿಸಿತು.

ಸುಭಾಷಿತ

ಯಾರ ಮನಸ್ಸಿನಲ್ಲಿ ನಾನೇ ಸರಿ ಎನ್ನುವುದು ಇರುತ್ತದೆ, ಆತನಿಗೆ ತನ್ನ ತಪ್ಪಿನ ಅರಿವಾಗು ವುದಿಲ್ಲ.

ಅನಾಮಿಕ

ಔತಣಕೂಟಕ್ಕೆ ಶಾಸಕರಿಗೆ ಖುದ್ದು ಆಹ್ವಾನ ನೀಡಿದ ಡಿಕೆಶಿ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರ್ಣಗೊಳಿಸಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಅವರು, ಇಂದು ಕಾಂಗ್ರೆಸ್‌ನ ಶಾಸಕರಿಗೆ, ಜನಪ್ರತಿನಿಧಿ ಗಳಿಗೆ ಔತಣಕೂಟ ಆಯೋಜಿಸಿದ್ದು ಅದಕ್ಕಾಗಿ ಪಕ್ಷದ ಶಾಸಕರಿಗೆ ಖುದ್ದಾಗಿ ಆಹ್ವಾನ ನೀಡಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರದ ಕಲಾಪದ ನಡುವೆ ತಮ್ಮ ಸ್ಥಾನದಿಂದ ಎದ್ದು ಕಾಂಗ್ರೆಸ್ ಪಕ್ಷದ ಪ್ರತಿಯೊಬ್ಬ ಶಾಸಕರ ಬಳಿಗೆ ಹೋದ ಡಿ.ಕೆ. ಶಿವಕುಮಾರ್ ಔತಣಕೂಟದಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದರು. ಪಕ್ಷೇತರ ಸದಸ್ಯರಾಗಿರುವ ಪಾಂಡವಪುರದ ದರ್ಶನ್ ಪುಟ್ಟಣ್ಣಯ್ಯ ಅವರಿಗೂ ಆಹ್ವಾನ ನೀಡಿದರು. ಈ ಹಂತದಲ್ಲಿ ಬಿಜೆಪಿಯ ಕೆಲ ಶಾಸಕರಿಗೂ ಹಸ್ತಲಾಘವ ನೀಡಿದ ಡಿ.ಕೆ.ಶಿವಕುಮಾರ್ ಅವರು ಉಭಯ ಕುಶಲೋಪರಿ ವಿಚಾರಿಸಿಕೊಂಡರು. ಸಿಎಂ ಕುರ್ಚಿ ಡಿ.ಕೆ.ಶಿವಕುಮಾರ್ ಗಾಬರಿ: ವಿಧಾನಸಭೆಯ ಪ್ರಶ್ನೋತ್ತರದ ಅವಧಿಯಲ್ಲಿ ಬಿಜೆಪಿಯ ಶಾಸಕ ಉದಯ್ ಗರುಡಾಚಾರ್,

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಳಿ ಮಾತನಾಡಲು ಹೋಗಿದ್ದರು.

ಅದೇ ವೇಳೆ ಬೆಂಗಳೂರಿನ ತೆರಿಗೆ ಪದ್ಧತಿಗೆ ಸಂಬಂಧಪಟ್ಟಂತೆ ವಿರೋಧ ಪಕ್ಷದ ನಾಯಕರು ಸದಸ್ಯರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಅತ್ತ ಗಮನ ಕೊಟ್ಟಿದ್ದ ಡಿ.ಕೆ.ಶಿವಕುಮಾರ್ ಅವರು ತಮ ಬಳಿ ಬಂದ ಉದಯ್ ಗರುಡಾಚಾರ್ ಅವರನ್ನು ಸ್ವಲ್ಪ ಸಮಯ ಕುಳಿತುಕೊಳ್ಳುವಂತೆ ಕೈ ಸನ್ನೆ ಮಾಡಿದರು. ಉದಯ್ ಗರುಡಾಚಾರ್ ಅವರು, ಡಿ.ಕೆ.ಶಿವಕುಮಾರ್ ಪಕ್ಕದಲ್ಲಿ ಅವರ ಕುರ್ಚಿಯಲ್ಲಿ ಕೂರಲು ಮುಂದಾದರು. ಗಾಬರಿ ಯಾದ ಡಿ.ಕೆ.ಶಿವಕುಮಾರ್, ಉದಯ್ ಗರುಡಾಚಾರ್ ಅವರ ಕೈಹಿಡಿದು ಅಲ್ಲಿ ಕುಳಿತುಕೊಳ್ಳದಂತೆ ಎಚ್ಚರಿಸಿ ತಮ ಬಲಬದಿಯಲ್ಲಿದ್ದ ಖಾಲಿ ಕುರ್ಚಿಯಲ್ಲಿ ಕೂರಲು ತಿಳಿವಳಿಕೆ ನೀಡಿದರು. ಇದನ್ನು ಗಮನಿಸಿದ ಬಿಜೆಪಿಯ ಸುನೀಲ್‌ಕುಮಾರ್, ಸಿಎಂ ಕುರ್ಚಿಯಲ್ಲಿ ಯಾರು ಕೂರಬೇಕು ಯಾರ್ಯಾರೋ ಕೂರುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ಎರಡನೇ ಬಾರಿ ಶಾಸಕರಾಗಿರುವ ಉದಯ ಗರುಡಾಚಾರ್ ಅವರಿಗೆ ಸದನದ ನಿಯಮಗಳ ಅರಿವಿನ ಕೊರತೆ ಇದ್ದಂತೆ ಕಂಡುಬಂತು. ಡಿ.ಕೆ.ಶಿವಕುಮಾರ್ ಅವರ ಜೊತೆಯಲ್ಲಿ ಮಾತುಕತೆ ಮುಗಿಸಿದ ಬಳಿಕ ಅಲ್ಲಿಂದ ನೇರವಾಗಿ ಸಭಾಧ್ಯಕ್ಷರ ಮುಂದಿನ ಬಾವಿಯ ಬಳಿಯಿಂದ ಹಾದು ಬಂದರು. ಇದು ಕೆಲಕಾಲ ಗೊಂದಲದ ವಾತಾವರಣವನ್ನು ನಿರ್ಮಿಸಿತ್ತು. ಪ್ರತಿಭಟನೆ ನಡೆಸದ ಹೊರತೂ ಶಾಸಕರು ಸದನದ ಸಂದರ್ಭದಲ್ಲಿ ಬಾವಿಯಲ್ಲಿ ಹಾದು ಹೋಗಬಾರದು ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿ ಹೇಳಿದರು.

ಕವಿತಾಳ: ರೂ7.00 ಲಕ್ಷಕ್ಕೆ ವಾರದ ಸಂತೆ ಹರಾಜು

ನೈಜ್ಯ ದೆಸೆ ನ್ಯೂಸ್

ಕವಿತಾಳ: ಇಲ್ಲಿನ ಪಟ್ಟಣ ಪಂಚಾಯಿತಿ ಆವರಣದಲ್ಲಿ ನಡೆದ ವಾರದ ಸಂತೆ ಸುಂಕ ವಸೂಲಾತಿಯ ವಾರ್ಷಿಕ ಹರಾಜು ಪ್ರಕ್ರಿಯೆಯು ಪೂರ್ಣಗೊಂಡಿದ್ದು, ಈ ಬಾರಿಯ ಗುತ್ತಿಗೆಯನ್ನು ರಫಿ ಮೆಹಬೂಬ್ ಸಾಬ್ ಒಂಟಿಬಂಡಿ ಅವರು ಪಡೆದುಕೊಂಡಿದ್ದಾರೆ.

ಇಂದು ನಡೆದ ಬಹಿರಂಗ ಹರಾಜಿನಲ್ಲಿ ಒಟ್ಟು ರೂ.7,00,100 ಗೆ ಹರಾಜು ಕೂಗುವ ಮೂಲಕ ಅವರು ಈ ವರ್ಷದ ಗುತ್ತಿಗೆಯನ್ನು ತಮ್ಮದಾಗಿಸಿಕೊಂಡರು. ಪಂಚಾಯಿತಿ ಅಧಿಕಾ–ರಿಗಳು ಹಾಗೂ ಆಡಳಿತ ಮಂಡಳಿಯ ಸಮ್ಮುಖದಲ್ಲಿ ಈ ಪ್ರಕ್ರಿಯೆ ನಡೆಯಿತು. ನಂತರ ಮುಖ್ಯಾಧಿಕಾರಿ ಜಸ್‌ಪಾಲ್ ಸಿಂಗ್ ಮಾತನಾಡಿ "ಗುತ್ತಿಗೆದಾರರು ನಿಗದಿಪಡಿಸಿದ ನಿಯಮಗಳ ಅನ್ವಯವೇ ಸಂತೆ ಸುಂಕವನ್ನು ವಸೂಲಿ ಮಾಡಬೇಕು. ಸಾರ್ವಜನಿಕ–ರಿಗೆ ಹಾಗೂ ವ್ಯಾಪಾರಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು ಗುತ್ತಿಗೆದಾರರ ಜವಾಬ್ದಾರಿಯಾಗಿದೆ,

ಸಂತೆ ಸುಂಕ ವಸೂಲಾತಿಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವಂತೆ ಮತ್ತು ನಿಗದಿತ ದರಕ್ಕಿಂತ ಹೆಚ್ಚಿನ ಹಣ ವಸೂಲಿ ಮಾಡಬಾರದು" ಎಂದು ಗುತ್ತಿಗೆದಾರ–ರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಪಟ್ಟಣ ಪಂಚಾಯತ್ ಆವರಣದಲ್ಲಿ ನಡೆದ ಹರಾಜು ಪ್ರಕ್ರಿಯೆ ಮುಖ್ಯಾಧಿಕಾರಿಗಳ ಹಾಗೂ ಆಡಳಿತ ಮಂಡಳಿಯ ಸದಸ್ಯರ, ಮುಖಂಡರ ಸಮಮುಖದಲ್ಲಿ ಸಂಪೂರ್ಣ ಪಾರದರ್ಶಕವಾಗಿ ಸಾಗಿತು.

ಹರಾಜು ಸಂದರ್ಭದಲ್ಲಿ ಪಟ್ಟಣ ಪಂಚಾಯತ್ ಸದಸ್ಯರಾದ ರಮೇಶ್ ನಗನೂರು, ರುಕ್ಮುದ್ದೀನ್, ಮುಖಂಡರಾದ ತಿಪ್ಪಯ್ಯಸ್ವಾಮಿ ,ಓಬಣ್ಣ ಕಡಕಲ್ ಹಾಗೂ ಪಂಚಾಯತ್ ಸಿಬ್ಬಂದಿಗಳಾದ ರಾಘವೇಂದ್ರ ಕುಲಕರ್ಣಿ, ಪ್ರಶಾಂತ್, ರಾಮು, ಮಹೇಶ್, ವೆಂಕಟೇಶ್ ಸೇ–ರಿದಂತೆ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

ಶ್ರೀಶೈಲ ಪಾದಯಾತ್ರಿಗಳಿಗೆ ಅನ್ನದಾಸೋಹ

ನೈಜ್ಯ ದೆಸೆ ನ್ಯೂಸ್

ಕವಿತಾಳ: ಶ್ರೀಶೈಲಕ್ಕೆ ಪಾದಯಾತ್ರೆ ಕೈಗೊಂಡಿರುವ ಭಕ್ತರಿಗೆ ಪಟ್ಟಣದ ಭಕ್ತ–ರಿಂದ ಅನ್ನದಾಸೋಹವನ್ನು ಕನಕನಗರ ಹತ್ತಿರ ಕೈಗೊಳ್ಳಲಾಗಿದೆ.

ದಾಸೋಹ ಸೇವೆಯಲ್ಲಿ ಪಾಲ್ಗೊಂಡಿರುವ ಶಿವಣ್ಣತಾತ ದಿನ್ನಿ ಅವರು ಮಾತನಾಡಿ 'ಪಟ್ಟಣದ ಭಕ್ತ–ರಿಂದ ಕಳೆದ 15 ವರ್ಷಗಳಿಂದ ಪಟ್ಟಣದ ಮೂಲಕ ಶ್ರೀಶೈಲ್ಕಕೆ ತೆರಳುವ ಭಕ್ತರಿಗೆ ಬೆಳಿಗ್ಗೆ ಚಹಾ, ಬಿಸ್ಕಿಟ್, ಉಪಹಾರ, ಮದ್ಯಾಹ್ನ ಮತ್ತು ರಾತ್ರಿ ಹೊತ್ತಿಗೆ ಬರುವ ಭಕ್ತರಿಗೆ ಉಗ್ಗಿ, ಅನ್ನ ಸಾಂಬರ್, ಪಲಾವ್ ಸೇರಿದಂತೆ ಕಲ್ಲಂಗಡಿ ಹಣ್ಣುಗಳು,ಮಜ್ಜಿಗೆ, ಬಾಳೆಹಣ್ಣು ವ್ಯವಸ್ಥೆಯನ್ನು ಕಲ್ಪಿಸಲಾಗಿದೆ' ಎಂದರು.

ಯಮನಪ್ಪದಿನ್ನಿ, ಕರಿಯಪ್ಪ ದಿನ್ನಿ, ಶಿವನಪ್ಪ ದಿನ್ನಿ, ಸಿದ್ದನಗೌಡ, ನಿಂಗ್ಪಪ ದಿನ್ನಿ, ನಿಂಗಣ್ಣ ಪೂಜಾರಿ, ಆದ–'ಪ್ಪ ದಿನ್ನಿ, ದೇವರಾಜ ದಿನ್ನಿ,ಭೀರಪ್ಪ ದಿನ್ನಿ, ನಿಂಗಪ್ಪ ಹಿರೇಕುರುಬರು, ಶಂಕ್ರ ?ಪಪ ತೊಪ್ಪಲದೊಡ್ಡಿ, ಅಯ್ಯಪ್ಪ ತೋಳ ಸೇರಿದಂತೆ ಇನ್ನಿತರ ಮುಖಂಡರು ಐದು ದಿನಗಳ ಕಾಲ ಭಕ್ತರಿಗೆ ಪ್ರಸಾದ ಸೇವೆಯನ್ನು ಕೈಗೊಂಡಿದ್ದರು.

ವಿದ್ಯಾರ್ಥಿಯ ನಿಗೂಢ ಸಾವು :ಕೊಲೆ ಶಂಕೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನ ಗುಂಡಸಾಗರದ 15 ವರ್ಷದ ವಿದ್ಯಾರ್ಥಿ ಕಾರ್ತಿಕ್ ತಂದೆ ಬಸವರಾಜಪ್ಪ ಸೂಡಿ ನಿಗೂಢವಾಗಿ ಸಾವಿಗೀಡಾಗಿದ್ದು, ಈ ಸಂಬಂಧ ಅದೇ ಗ್ರಾಮದ ಮೂವರ ವಿರುದ್ಧ ಲಿಂಗಸಗೂರು ಠಾಣೆಯಲ್ಲಿ ಕೊಲೆಯ ಪ್ರಕರಣ ದಾಖಲಾಗಿದೆ.

ಕಾರ್ತಿಕ್ ಒಂಬತ್ತನೇ ತರಗತಿ ಓದುತ್ತಿದ್ದ ಭಾನುವಾರ ಮದುವೆ ಕಾರ್ಯಕ್ರಮವೊಂದರಲ್ಲಿ ಊಟ ಮುಗಿಸಿದ್ದ ಕಾರ್ತಿಕ್, ಲಿಂಗಸಗೂ–ರಿಗೆ ಹೋಗಿ ಬರುವುದಾಗಿ ತಿಳಿಸಿದ್ದ. ಆದರೆ, ಕಾರ್ತಿಕ್‌ನನ್ನು ಆತನ ಗೆಳೆಯರಾದ ಮುತ್ತಪ್ಪ, ವಿನೋದ ಹಾಗೂ ಸಾಹಿಲ್ ಸೇರಿ ಮೋಟಾರ್ ಸೈಕಲ್ ಮೇಲೆ ಕರೆದೊಯ್ದು, ಆತನನ್ನು ಕೊಲೆ ಮಾಡಿ, ಶವವನ್ನು ಕರಡಕಲ್ಲ ಕೆರೆ ಹತ್ತಿರ ಬಿಸಾಕಿದ್ದಾರೆಂದು ಬಾಲಕನ ತಂದೆ ಆರೋಪಿಸಿದ್ದಾರೆ.

ಕರಡಕಲ್ ಕೆರೆ ಬಳಿ ಮಧ್ಯಾಹ್ನದ ಅವಧಿಯಲ್ಲಿ ನಡೆದಿರುವ ಸಾಧ್ಯತೆಯಿದೆ ಎಂದು ಅಂದಾಜಿಸಲಾಗಿದ್ದು ಕಾರ್ತಿಕ್ ತಂದೆ ಬಸವರಾಜ ಅಮೀನಪ್ಪ ನೀಡಿದ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಕೈಗೆತ್ತಿಕೊಂಡಿದ್ದಾರೆಂದು ತಿಳಿದು ಬಂದಿದೆ.

ಮಹಿಳೆಯರಿಗೆ ಕುಟುಂಬದಲ್ಲಿ ಸಾಮರಸ್ಯ ಕಾಪಾಡುವ ಶಕ್ತಿ ಇದೆ :ರಾಮನಗೌಡ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ನಮ್ಮ ಕಾನೂನಿನ ಸೂರಿನಡಿ ಮಹಿಳೆಯ–ರಿಗೆ ರಕ್ಷಣೆಯಿದ್ದು, ಅಂತಹ ಕಾನೂನುಗಳ ಬಗ್ಗೆ ಪ್ರತಿಯೊರ್ವ ಮಹಿಳೆಯೂ ಅರಿವು ಹೊಂದಬೇಕು. ಮಹಿಳೆಯರು ತಮ್ಮ ಹಕ್ಕುಗಳು ಮತ್ತು ಕರ್ತವ್ಯದ ಬಗ್ಗೆ ಹೆಚ್ಚಿನ ತಿಳಿವಳಿಕೆ ಪಡೆಯದಿದ್ದರೆ ಸಮಾಜದಲ್ಲಿ ನಡೆಯುವ ದೌರ್ಜನ್ಯಗಳಿಂದ ರಕ್ಷಣೆ ಹೊಂದಲು ಅಸಾಧ್ಯ. ಹೀಗಾಗಿ ಮಹಿಳೆಯರಿಗೆ ಕಾನೂನು ಅರಿವು ಅಗತ್ಯ ಎಂದು ಲಿಂಗಸುಗೂರಿನ ನ್ಯಾಯವಾದಿ ಪ್ರೇರಣಾ ರಾಮನಗೌಡ ಹೇಳಿದರು.

ಮಸ್ಕಿ ಪಟ್ಟಣದ ಭ್ರಮರಾಂಬ ಕಲ್ಯಾಣ ಮಂಟಪದಲ್ಲಿ ವಿವಿಧ ಮಹಿಳಾ ಸಂಘಟನೆಗಳೊಂದಿಗೆ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ದಿನಮಾನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧನೆಯನ್ನು ಮಾಡುತ್ತಿದ್ದಾರೆ. ಕಾನೂನಿನ ಸೂ–ರಿನಡಿ ಮಹಿಳೆಯರಿಗೆ ರಕ್ಷಣೆಯಿದ್ದು, ಅಂತಹ ಕಾನೂನುಗಳ ಬಗ್ಗೆ ಪ್ರತಿಯೊಬ್ಬ ಮಹಿಳೆಯೂ ಅರಿವು ಹೊಂದಬೇಕು. ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಕೆಲಸ ನಿರ್ವಹಿಸುತ್ತಿದ್ದಾರೆ. ಮಹಿಳೆಯರಿಗಾಗಿ ಜಾರಿಗೆ ತಂದಿರುವ ಕಾನೂನಿನ ಬಗ್ಗೆ ತಿಳಿದುಕೊಂಡು ಇತರರಿಗೂ ಅದನ್ನು ತಿಳಿಸುವ ಕೆಲಸ ಮಾಡಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಯೂ ಕಾನೂನಿನ ಅರಿವು ಹೊಂದಬೇಕು.

ಅದರಲ್ಲೂ ಮಹಿಳೆಯರು ಕಾನೂನಿನ ಬಗ್ಗೆ ಮಾಹಿತಿ ಹೊಂದಬೇಕೆಂದು ಮಹಿಳೆಯರ ಹಕ್ಕು, ರಕ್ಷಣೆಗಳ ಕುರಿತು ಕಾನೂನು ಅರಿವು ಬಗ್ಗೆ ಉಪನ್ಯಾಸ ನೀಡಿದರು. ಶಿಕ್ಷಕಿ ನೇತ್ರಾವತಿ ಹಿರೇಮಠ, ಜಿ.ಪಂ ಮಾಜಿ ಅಧ್ಯಕ್ಷೆ ಶ್ರೀದೇವಿ ಕ್ಯಾತ್ನಟ್ಟಿ ಮಾತನಾಡಿ, ಕುಟುಂಬ ನಿರ್ವಹಣೆ ಹಾಗೂ ಕುಟುಂಬದಲ್ಲಿ ಸಾಮರಸ್ಯ ಕಾಪಾಡುವಂತ ಶಕ್ತಿ ಮಹಿಳೆಯರಲ್ಲಿದೆ ಎಂದರು. ಮಹಿಳೆ ಸಾಮರ್ಥ್ಯಳು ಅವಳಲ್ಲಿ ಅಗಾದವಾದ ಶಕ್ತಿಯಿದೆ. ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾದದ್ದು ಅದನ್ನು ಸಶಕ್ತಳಾಗಿ ನಿರ್ವಹಿಸುವ ಶಕ್ತಿ ಕೂಡ ಮಹಿಳೆಯರಲ್ಲಿದೆ ಎಂದರು.

ಇಂದಿನ ದಿನಮಾನಗಳಲ್ಲಿ ಮಹಿಳೆಯರು ಶಿಕ್ಷಣ ಪಡೆದು ಉದ್ಯೋಗ ಮಾಡುತ್ತಾ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ. ಅಲ್ಲದೆ ಸಾಧನೆಯ ಮೈಲಿಗಲ್ಲಿನ ಮಹಿಳೆಯರು ಕಾಣಿಸಿಕೊಳ್ಳುತ್ತಿದ್ದಾರೆ. ತಾಯಿ ಗುಣವಿರುವಂತ ಹೆಣ್ಣು ಸಮಾಜದಲ್ಲಿನ ಅಂಕುಡೊಂಕುಗಳನ್ನು ತಿದ್ದುವಂತ ಪ್ರಬುದ್ಧತೆಯನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದರು. ಶಿಕ್ಷಣವಂತರಾದ ಮಹಿಳೆಯರಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಹೆಣ್ಣು ಮಗು, ಗಂಡು ಮಗು ಎಂಬ ತಾರತಮ್ಯ ಮಾಡದೆ ಮಕ್ಕಳಿಗೆ ಉತ್ತಮವಾದ ಸಂಸ್ಕಾರಯುತ ಶಿಕ್ಷಣ ಕೊಡಿಸಿ ಉತ್ತಮ ನಾಗರೀಕರನ್ನಾಗಿ ಮಾಡಿ ಸಮಾಜಸೇವೆಗೆ ಮುಂದಾಗುವಂತೆ ಬೆಳೆಸುವದಕ್ಕೆ ಮುಂದಾಗಬೇಕೆಂದರು.

ಚಂದ್ರಕಲಾ ದೇಶಮುಖ ಮಾತನಾಡಿ, ಇಂದಿನ ಆಧುನಿಕ ಜಗತ್ತಿನಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡುತ್ತಿದ್ದಾರೆ ಎಂದರು. ಉದ್ಯಮಿ ಪ್ರಕಾಶ ಧಾರಿವಾಲ, ಚಂದ್ರಕಲಾ ದೇಶಮುಖ, ವಿದ್ಯಾವತಿ ವನಕಿ, ರೋಹಿಣಿ, ಸಹನಾ ಬ್ಯಾಳಿ, ಈರಮ್ಮ ಬರಗಿ, ಶಾರದಾ, ಕಾವೇರಿ, ಚೇತನ, ಲಲಿತಾ.ಪಿ ಹಾಗೂ ವಿವಿಧ ಮಹಿಳಾ ಸಂಘಟನೆ ಪದಾಧಿಕಾರಿಗಳು ಸೇ–ರಿದಂತೆ ನೂರಾರು ಮಹಿಳೆಯರು ಇದ್ದರು.

ಸಾಹಿತ್ಯ ಸಿಂಚನ

ಸಮಯವು ನದಿ ಹರಿವಂತೆ
ನಿಲ್ಲದೆ ಮುಂದೆ ಸಾಗುತ್ತದೆ,
ಹೋದ ಕ್ಷಣ ಮರಳಿ ಬಾರದು
ಹೊಸ ದಾರಿಯನ್ನು ತೋರಿಸುತ್ತದೆ.

ಸಮಯವೇ ಗುರು ನಮ್ಮಗೆ
ಪಾಠಗಳನ್ನು ಕಲಿಸುತ್ತದೆ,
ಕಷ್ಟದಲ್ಲಿ ಧೈರ್ಯ ನೀಡುತ್ತದೆ
ಸಂತೋಷದ ಕ್ಷಣ ಕೊಡುತ್ತದೆ.

ಸಮಯವನ್ನು ಸದುಪಯೋಗಿಸಿದರೆ
ಜೀವನವು ಬೆಳಗುತ್ತದೆ,
ಸಮಯವನ್ನು ವ್ಯರ್ಥ ಮಾಡಿದರೆ
ಕನಸುಗಳು ದೂರವಾಗುತ್ತದೆ.

ಆದುದರಿಂದ ಸ್ನೇಹಿತರೇ
ಸಮಯದ ಮೌಲ್ಯ ಅರಿಯಿರಿ,
ಪ್ರತಿ ಕ್ಷಣವನ್ನೂ ಕಾಪಾಡಿ
ಜೀವನವನ್ನು ಸುಂದರಗೊಳಿಸಿರಿ.

ಹನುಮೇಶ

ಮಾರ್ಚ್ 16ರಂದು ವಿಶ್ವ ಗ್ರಾಹಕರ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಇಲ್ಲಿನ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಮಾರ್ಚ್ 16ರ ಬೆಳಿಗ್ಗೆ 10 ಗಂಟೆಗೆ ನಗರದ ಅಂಬೇಡ್ಕರ್ ವೃತ್ತದ ಹತ್ತಿರದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ-2026ರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಯು ಪರೀಕ್ಷೆ; ಅರ್ಥಶಾಸ್ತ್ರಕ್ಕೆ 865 ವಿದ್ಯಾರ್ಥಿಗಳು ಗೈರು ರಾಯಚೂರು ಮಾರ್ಚ್ 10 (ಕರ್ನಾಟಕ ವಾರ್ತೆ): ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯಿಂದ ಜಿಲ್ಲೆಯ 43 ಪರೀಕ್ಷೆ ಕೇಂದ್ರಗಳಲ್ಲಿ ಮಾರ್ಚ 10ರಂದು ಅರ್ಥಶಾಸ್ತ್ರ ವಿಷಯದ ಪರೀಕ್ಷೆ ನಡೆಯಿತು. ಒಟ್ಟು 12,692 ವಿದ್ಯಾರ್ಥಿಗಳು ನೋಂದಣಿಯಾಗಿದ್ದು, 11,827 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 865 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಭಾರಿ ಉಪನಿರ್ದೇಶಕರಾದ ಸೋಮಶೇಖರಪ್ಪ ಹೋಕ್ರಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾರ್ಚ್ 12ರಂದು ಮಾಟಮಾರಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಇಲ್ಲಿನ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ವ್ಯಾಪ್ತಿಯ ಮಾಟಮಾರಿ 110/11 ಕೆವಿ ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮಾರ್ಚ್ 12ರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ಮಟಮಾರಿ, ಗಾರಲದಿನ್ನಿ,

ಆರೋಳ್ಳಿ, ನಾಗಲಾಪೂರ, ಪುರತಿಪ್ಲಿ, ಹೀರಾಪುರ, ಗಟ್ಟುಬಿಚ್ಚಾಲಿ, ಕಟಕ್ನೂರ್, ರಾಜೋಳ್ಳಿ, ಜುಕುರ್ ವ್ಯಾಪ್ತಿಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಗ್ರಾಮೀಣ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಶೈಲ ಪಾದಯಾತ್ರಿಕರಿಗೆ ಶ್ರೀಶೈಲ ದಾಸೋಹ ಸೇವಾ ಸಮಿತಿ ಯುವಕ ಮಿತ್ರರಿಂದ ಭಕ್ತಿಪೂರ್ಣ ಸೇವೆ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ಶ್ರೀಶೈಲಕ್ಕೆ ಪಾದಯಾತ್ರೆ ಮಾಡುವ ಭಕ್ತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ಅವರ ಸೇವೆಗೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಶ್ರೀಶೈಲ ದಾಸೋಹ ಸೇವಾ ಸಮಿತಿ ಯುವಕ ಮಿತ್ರರು ಭಕ್ತಿಭಾವದಿಂದ ಮುಂದಾಗಿರುವುದು ಗಮನ ಸೆಳೆಯುತ್ತಿದೆ. ಪಾದಯಾತ್ರಿಕ-ರಿಗಾಗಿ ಅನ್ನಸಂತರ್ಪಣೆ, ವಿಶ್ರಾಂತಿ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಿ ಯುವಕರು ಸೇವಾ ಮನೋಭಾವವನ್ನು ಮೆರೆದಿದ್ದಾರೆ.

ಜಾಲಹಳ್ಳಿ ಗ್ರಾಮದಲ್ಲಿ ಶ್ರೀಶೈಲ ದಾಸೋಹ ಸೇವಾ ಸಮಿತಿ ಯುವಕ ಮಿತ್ರರು ಕಳೆದ 13 ವರ್ಷಗಳಿಂದ ನಿರಂತರವಾಗಿ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿ ಭಕ್ತ-ರಿಗಾಗಿ ಅನ್ನಸಂತರ್ಪಣಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿದ್ದಾರೆ. ಪ್ರತಿದಿನ ಬೆಳಿಗ್ಗೆ

4 ಗಂಟೆಯಿಂದಲೇ ಪಾದಯಾತ್ರಿಕರು ತಮ್ಮ ಪ್ರಯಾಣ ಆರಂಭಿಸಿ ಜಾಲಹಳ್ಳಿ ಹಾಗೂ ಸಮೀಪದ ಕರಡಿಗುಡ್ಡ ಸೀಮಾಂತರದ ದೇವಸ್ಥಾನಕ್ಕೆ ತಲುಪುತ್ತಾರೆ. ಇಲ್ಲಿ ಯಾತ್ರಿಕ-ರಿಗಾಗಿ ಅನ್ನಸಂತರ್ಪಣೆಯ ಜೊತೆಗೆ ವಿಶ್ರಾಂತಿ ವ್ಯವಸ್ಥೆಯನ್ನೂ ಮಾಡಲಾಗಿದೆ. ಯಾತ್ರಿಕರನ್ನು ಟೀ ಹಾಗೂ ಬಿಸ್ಕೆಟ್ ನೀಡಿ ಆತ್ಮೀಯವಾಗಿ ಸ್ವಾಗತಿಸಲಾಗುತ್ತದೆ. ಬೆಳಗಿನ ಉಪಹಾರವಾಗಿ ಇಡ್ಲಿ, ಸಾಂಬಾರ್, ದೋಸೆ, ವಡೆ ಸೇರಿದಂತೆ ವಿವಿಧ ಆಹಾರ ಪದಾರ್ಥಗಳನ್ನು ನೀಡಲಾಗುತ್ತದೆ.

ಜೊತೆಗೆ ದಿನವಿಡೀ ಅನ್ನ, ಸಾಂಬಾರ್, ಹಣ್ಣು ಪ್ರಸಾದ, ತಂಪು ಪಾನೀಯ ಹಾಗೂ ಮಜ್ಜಿಗೆ ಮುಂತಾದವುಗಳನ್ನು ಭಕ್ತ-ರಿಗೆ ಪ್ರೀತಿಯಿಂದ ವಿತರಿಸಲಾಗುತ್ತಿದೆ. ದೂರದ ಪ್ರಯಾಣದಿಂದ ಆಯಾಸಗೊಂಡು ಬರುವ ಪಾದಯಾತ್ರಿಕರಿಗೆ ರಾತ್ರಿ ವಿಶ್ರಾಂತಿಗಾಗಿ ಚಾಪೆ ಮತ್ತು ಜಮಕಾನ ವ್ಯವಸ್ಥೆ ಮಾಡಲಾಗಿದೆ. ಬೆಳಗ್ಗೆ ಸ್ನಾನಕ್ಕೆ ಬಿಸಿ ನೀರು, ಕಾಲು ಮಸಾಜ್ ಹಾಗೂ ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಕೂಡ ಒದಗಿಸಿರುವುದು ವಿಶೇಷವಾಗಿದೆ. ಸುಮಾರು 15,000ಕ್ಕೂ ಹೆಚ್ಚು ಮಲ್ಲಿಕಾರ್ಜುನ ಸ್ವಾಮಿ ಭಕ್ತರು ಇಲ್ಲಿ ಪ್ರಸಾದ ಸ್ವೀಕ-ರಿಸಿದ್ದಾರೆ ಎಂದು ಅಂದಾಜಿಸಲಾಗಿದೆ.

ಈ ಸೇವೆಯಲ್ಲಿ ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರವರವರೆಗೆ ಎಲ್ಲರೂ ಭಾಗವಹಿಸಿ ಸೇವೆ ಸಲ್ಲಿಸಿರುವುದು ವಿಶೇಷವಾಗಿದೆ. ಈ ರೀತಿಯ ನಿಸ್ವಾರ್ಥ ಸೇವಾ ಕಾರ್ಯಗಳ ಮೂಲಕ ಜಾಲಹಳ್ಳಿಯ ಶ್ರೀಶೈಲ ದಾಸೋಹ ಸೇವಾ ಸಮಿತಿ ಯುವಕ ಮಿತ್ರರು ಭಕ್ತಿ, ಆತಿಥ್ಯ ಮತ್ತು ಮಾನವೀಯತೆಯ ಮಾದರಿಯಾಗಿದ್ದು, ಸಾರ್ವಜನಿಕರಿಂದ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಪೌಷ್ಟಿಕ ಆಹಾರ ಮಹತ್ವದ್ದು

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಸಮೀಪದ. ಟಿ ಸೂರ್ಯರಡ್ಡಿ ಕ್ಯಾಂಪ್ ಅಂಗನವಾಡಿ ಕೇಂದ್ರದಲ್ಲಿ ತಾಯಿಂದಿರಿಗೆ ಮಾಹಿತಿ ಶಿಕ್ಷಣ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಕುರಿತು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು ಮಾತನಾಡಿ ಆರೋಗ್ಯಕರ ತಾಯಿಂದಿರಿಂದ ಆರೋಗ್ಯವಂತ ಮಕ್ಕಳನ್ನು ನೋಡಬಹುದು. ಅಪೌಷ್ಟಿಕತೆಯಿಂದ ಮಕ್ಕಳ ರೋಗಕ್ಕೆ ತುತ್ತಾಗುವ ಸಾಧ್ಯತೆಯಿದೆ ಇದೆ.

ಮಕ್ಕಳಲ್ಲಿ ಅಪೌಷ್ಟಿಕತೆ ಮಕ್ಕಳು ದೈಹಿಕ ಬೆಳವಣಿಗೆ ಕುಂಠಿತವಾಗುವುದು ಅಪೌಷ್ಟಿಕತೆ ಮುಖ್ಯ ಕಾರಣ ಅನಕ್ಷರಸ್ಥತೆ ಬಡತನ ಮಗುವಿನ ಆರೈಕೆ ಮಾಡಿದಿರುವುದು ಮಗುವಿಗೆ ತಪ್ಪದೇ ಎದೆ ಹಾಲುಣಿಸುವುದು ಮಗುವಿಗೆ ಕಿವುಚಿದ ಹಣ್ಣುಗಳನ್ನು ಮತ್ತು ದೇಶದ ಹಾಗೂ ಕಿವುಚಿದ ತರಕಾರಿಗಳು ಮತ್ತು ಬೆಯಿಸಿದ ಬೇಳೆಗಳಂತ ಪೂರಕ ಹಾರವನ್ನು ಕೊಡಬೇಕು ಮಗುವಿಗೆ ಬೇಕಾದ ವರ್ಷವಿರುವ ಎಲ್ಲಾ ಪೋಷಕಾಂಶಗಳು ಸಹ ತಾಯಿಯ ಎದೆಹಾಲಿನಲ್ಲಿ ಇರುತ್ತದೆ.

ತಾಯಿಯೇ ಎದೆಹಾಲು ಪರಿಶುದ್ಧ ಹಾಗೂ ರೋಗಾಣು ರಹಿತವಾಗಿದ್ದು ಮಗುವನ್ನು ಯಾವುದೇ ರೋಗ ಬರದಂತೆ ಅನೇಕ ಸಂಘಗಳಿಂದ ವಿಶೇಷವಾಗಿ ಅತಿಸಾರ ಬೇದಿಯಿಂದ ರಕ್ಷಿಸುತ್ತದೆ ಬೆಳವಣಿಗೆ ಹಂತದಲ್ಲಿ ಮಗುವಿನ ಆರೈಕೆ ಮುಖ್ಯವಾಗಿದೆ ಎಂದರು. ನಂತರ ಮಾತನಾಡಿದ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು ನಿಂಗಮ್ಮ ಅವರು ಹೆ-ರಿಗೆ ನಂತರ ತಾಯಿಯ ಆರೈಕೆ ಮುಖ್ಯವಾಗಿದೆ ತಾಯಿಂದಿರೂ ಹೆರಿಗೆ ನಂತರ ಪೌಷ್ಟಿಕ ಆಹಾರ ಸೇವನೆ ಮತ್ತು ಆರೋಗ್ಯದ ಆರೈಕೆ ಬಹಳ ಮಹತ್ವ ಪಡೆದಿದೆ ಎಲ್ಲಾ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆಯನ್ನು ಕಡ್ಡಾಯವಾಗಿ ಕೊಡಸಿಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರಾದ ರಾಜೇಶ್ವರಿ. ಆಶಾ ಕಾರ್ಯಕರ್ತರಾದ ಮಾಲಾಶ್ರೀ ಮತ್ತು ಮಕ್ಕಳ ತಾಯಿಂದಿರಾದ ಯಲ್ಲಮ್ಮ. ರಾಧಿಕಾ. ಅಂಬಿಕಾ. ಸವಿತಾ. ಹುಸೇನಬಿ. ಉಪಸ್ಥಿತರಿದ್ದರು.

ತೊರಣದಿನ್ನಿ: ಶಾಲಾ ದೂರ, ಖಾಸಗಿ ಶಾಲೆಯಲ್ಲಿ ಸೀಟಿಲ್ಲ: ಅತಂತ್ರ ಸ್ಥಿತಿಯಲ್ಲಿ ಕೂಲಿ ಕಾರ್ಮಿಕರ ಮಕ್ಕಳು

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಸರ್ಕಾರವು "ಎಲ್ಲರಿಗೂ ಶಿಕ್ಷಣ" ಎಂಬ ಘೋಷಣೆಯಡಿ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾ-ರಿಗೆ ತಂದಿದ್ದರೂ, ತಾಂತ್ರಿಕ ಕಾರಣಗಳಿಂದಾಗಿ ಬಡ ಮಕ್ಕಳು ಈ ಸೌಲಭ್ಯದಿಂದ ವಂಚಿತರಾಗುತ್ತಿರುವ ಗಂಭೀರ ಘಟನೆ ತೋರಣದಿನ್ನಿಯ ಜನವಸತಿ ಪ್ರದೇಶದಲ್ಲಿ ಬೆಳಕಿಗೆ ಬಂದಿದೆ.

ಮಸ್ಕಿ ತಾಲೂಕಿನ ತೋರಣದಿನ್ನಿ ಸರ್ಕಾರಿ ಶಾಲೆಯು ಮೂಲಸೌಕರ್ಯ ಅಥ-'ವಾ ಇತರ ಕಾರಣಗಳಿಂದಾಗಿ ಹಲವಾರು

ವರ್ಷಗಳಿಂದ ಸುಮಾರು 1.5 ಕಿಲೋಮೀಟ-ರ್ ದೂರಕ್ಕೆ ಸ್ಥಳಾಂತರಗೊಂಡಿದೆ. ಹಾಗೂ ತಾಯಮ್ಮ ಕ್ಯಾಂಪ್ ನ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯು ಸಿಬ್ಬಂದಿ ಕೊರತೆಯಿಂದ ಮುಚ್ಚಲಾಗಿದೆ.ಸಣ್ಣ ಮಕ್ಕಳು ಅಷ್ಟು ದೂರ ನಡೆದು ಹೋಗುವುದು ಪೋಷಕರಿಗೆ ಆತಂಕ ತಂದಿದೆ. ಇತ್ತ ಹತ್ತಿರದಲ್ಲೇ ಇರುವ ಖಾಸಗಿ ಶಾಲೆಗಳಲ್ಲಿ ಆರ್ ಟಿ ಇ ಅಡಿಯಲ್ಲಿ ಸೀಟು ಪಡೆಯಲು ಹೋದರೆ, "ದಾಖಲೆಗಳಲ್ಲಿ ಸರ್ಕಾರಿ ಶಾಲೆ ನಿಮಗೆ ಉಚಿತ ಸೀಟು ಸಿಗುವುದಿಲ್ಲ" ಎಂಬ ಉತ್ತರ ಬರುತ್ತಿದೆ.

"ನಾವು ದಿನವಿಡೀ ಕೂಲಿ ಮಾಡುವವರು. ಮಕ್ಕಳಿಗೆ 1.5 ಕಿ.ಮೀ(ತೋರಣದಿನ್ನಿ ಗ್ರಾಮದಿಂದ) ಹಾಗೂ 2.5 ಕಿ. ಮೀ. (ತಾಯಮ್ಮ ಕ್ಯಾಂಪ್)ದೂರದ ಶಾಲೆಗೆ ಬಿಟ್ಟು ಬರಲು ನಮಗೆ ಸಮಯವಿಲ್ಲ, ಮಕ್ಕಳನ್ನು ಒಬ್ಬರೇ ಕಳುಹಿಸಲು ರಸ್ತೆಯ ಸುರಕ್ಷತೆಯ ಭಯವಿದೆ. ಹತ್ತಿರದ ಖಾಸಗಿ ಶಾಲೆಗೆ ಸೇರಿಸೋಣ ಎಂದರೆ ಶುಲ್ಕ ಕಟ್ಟುವ ಆರ್ಥಿಕ ಶಕ್ತಿ ನಮಗಿಲ್ಲ.ಆರ್ ಟಿ ಇ ಸೌಲಭ್ಯವೂ ನಮಗೆ ತಾಂತ್ರಿಕ ಕಾರಣಗಳಿಂದ ಕೈತಪ್ಪುತ್ತಿದೆ" ಎಂದು ಸ್ಥಳೀಯ ಹನುಮೇಶ ನಾಯಕ ಮಾಜಿ ಗ್ರಾಪಂ ಉಪಾಧ್ಯಕ್ಷ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಕೆ.ಹನುಮಂತ್ರಾಯನಗರ ಭಕ್ತಾಧಿಗಳಿಂದ 11ನೇ ವರ್ಷದಶ್ರೀಶೈಲ ಮಲ್ಲಿಕಾರ್ಜುನ ಪಾದಯಾತ್ರೆ

ನೈಜ್ಯ ದೆಸೆ ನ್ಯೂಸ್

ಅರಕೇರಾ: ತಾಲೂಕಿನ ಕೆ.ಹನುಮಂತ್ರಾಯನಗರದ ಭಕ್ತಾಧಿಗಳಿಂದ ದಕ್ಷಿಣ ಭಾರತ ಪ್ರಸಿದ್ಧ ಪವಿತ್ರ ಕ್ಷೇತ್ರವಾದ ಶ್ರೀಶೈಲಕ್ಕೆ ಪಾದಯಾತ್ರೆ ಶ್ರೀಶೈಲದ ಮಲ್ಲಿಕಾರ್ಜುನಕ್ಷೇತ್ರಕ್ಕೆ ಯುಗಾದಿ ಹಬ್ಬದ ಅಂಗವಾಗಿ ರಥೋತ್ಸವಕ್ಕೆ ಪ್ರತಿವರ್ಷದಂತೆ ಈವರ್ಷಕೂಡಾ ಭಕ್ತಾಧಿಗಳು ಪಾತ್ರಯಾತ್ರೆ ಹಮ್ಮಿಕೊಳ್ಳಲಾಗಿದೆ. ಕೆ,ಹನುಮಂತ್ರಾಯನಗರದ ಭಕ್ತಾಧಿಗಳು 11 ನೇವರ್ಷದ ಪಾದಯಾತ್ರೆಗೆ ಇಂದು ದಿನಾಂಕ 9-3-2026 ರಂದು ಮುಂಜಾನೆ 6ಗಂಟೆಗೆ ಪಾದಯಾತ್ರೆಗೆ ಹೋರಟರು.

ಇಂದು ಕೆ,ಹನುಮಂತ್ರಾಯ ನಗರದಿಂದ ಪಾದಯಾತ್ರೆ ಆರಂಭಮಾಡಿ ಶ್ರೀ ಭಗಮ್ಮದೇವಿ ದೇವಸ್ಥಾನದಲ್ಲಿ ಮತ್ತು ಶ್ರೀಮಾರೇಮ್ಮದೇವಿ ದೇವಸ್ಥಾನದಲ್ಲಿ ವಿಶೇಷಪೂಜೆ ಸಲ್ಲಿಸಿದರು. ಪಾದಯಾತ್ರೆಗೆ ತೆರುಳುಭಕ್ತಾಧಿಗಳಿಗೆ ಗ್ರಾಮಸ್ಥರು ಭಾಜಿ ಭಜಂತ್ರಿಯೊಂದಿಗೆ ಬೀಳುಕೊಟ್ಟರು. ಪಾದಯಾತ್ರೆಯಲ್ಲಿ ಮಹಿಳೆಯರು ಪುರುಷರು ಮಕ್ಕಳು ಭಾಗವಹಿಸಿದ್ದರು. ಅರಕೇರಾ, ಮಲ್ಲಾಪೂರು, ಪಿಲಿಗುಂಡ ಮೂರು ಗ್ರಾಮಗಳ ಭಕ್ತಾಧಿಗಳು ಪಾದಯಾತ್ರೆ ಕೈಗೊಂಡಿದದ್ದರು.

ಸಂದರ್ಬದಲ್ಲಿ ಭಾಗೇಶನಾಯಕ ಮಾಜಿಗ್ರಾಮಪಂಚಾಯತ ಸದಸ್ಯರು, ವೆಂಕಟೇಶನಾಯಕ ಮಾಜಿ ಗ್ರಾಮ ಪಂಚಾಯತ ಸದಸ್ಯರು, ಕೃಷ್ಣನಾಯಕ ಕರ್ನಾಳ ಎಸ್ ಡಿ ಎಂಸಿ ಅಧ್ಯಕ್ಷರು, ಸಾಭಯ್ಯಕರ್ನಾಳ .ನಾಗೇಶಕರ್ನಾಳ, ಭೀಮಣ್ಣನಾಯಕ ಕರ್ನಾಳ, ಭಗವಂತ್ರಾಯನಾಯಕ ತಾತೆ ಮಾಜಿಗ್ರಾ.ಪಂ.ಸ. ಸಿದ್ದಲಿಂಗಪ್ಪ,ಬಸನಗೌಡ ಕರ್ನಾಳ,,ಶಿವಗೇನಿಜಲ್ಲೆ ರವಿ ಕರ್ನಾಳ. ರಂಗಪ್ಪ, ಮುದಕಪ್ಪ ಸೇರಿದಂತೆ ಕೆ,ಹನುಮಂತ್ರಾಯನಗರ ಹಾಗೂ ಅರಕೇರಾ ಗ್ರಾಮಸ್ಥರು ಉಪಸ್ಥಿತರಿದ್ದರು. ಪಾದಯಾತ್ರೆ ಕೈಗೊಂಡಿರುವ ಭಕ್ತಾಧಿಗಳಿಗೆ ಶಿವಗೇನಿನಾಯಕ ಜಲ್ಲೆ, ಬಸವರಾಜನಾಯಕ ಜಲ್ಲೆ, ಶಿವರಾಜನಾಯಕ ಕಟಗಿಮಿಷನ್ ಇವರುಗಳು ಭಕ್ತಾಧಿಗಳಿಗೆ ಉಪಹಾರ ವ್ಯವಸ್ಥೆಮಾಡಿದರು.

ಆರ್ ಮಾನಸಯ್ಯ ಅಕ್ಷರದ ಮೂಲಕ ಬದಲಾವಣೆ ತಂದ ಕ್ರಾಂತಿಕಾರಿ.

ನೈಜ್ಯ ದೆಸೆ ನ್ಯೂಸ್

ಮಾನಸಯ್ಯ ಅವರು ಕರ್ನಾಟಕದ ಪ್ರಮುಖ ಕಾರ್ಮಿಕ ಮುಖಂಡರು, ಹೋರಾಟಗಾರರು ಮತ್ತು ವೈಚಾರಿಕ ಚಿಂತಕರು. ಆರ್. ಮಾನಸಯ್ಯ ಹೋರಾಟದ ಬದುಕಿನ ಒಂದು ಸಮಗ್ರ ನೋಟ ಆರ್. ಮಾನಸಯ್ಯ ಎಂದರೆ ಕೇವಲ ಒಬ್ಬ ವ್ಯಕ್ತಿಯಲ್ಲ; ಅದೊಂದು ಶೋಷಿತ ವರ್ಗದ ಧ್ವನಿ. ಕರ್ನಾಟಕದ ಹೈದರಾಬಾದ್ ಕರ್ನಾಟಕ (ಈಗಿನ ಕಲ್ಯಾಣ ಕರ್ನಾಟಕ) ಭಾಗದಲ್ಲಿ ದಲಿತ, ಕಾರ್ಮಿಕ ಮತ್ತು ರೈತ ಚಳವಳಿಗಳಿಗೆ ಹೊಸ ದಿಕ್ಕು ನೀಡಿದವರು. ಮಾರ್ಕ್ಸ್ವಾದ ಮತ್ತು ಅಂಬೇಡ್ಕರ್ ವಾದವನ್ನು ಸಮನ್ವಯಗೊಳಿಸಿ ಹೋರಾಡಿದ ಅಪರೂಪದ ನಾಯಕರಲ್ಲಿ ಇವರು ಒಬ್ಬರು.

ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲೂಕಿನ ಗೆಜಾಲ್ಗಟ್ಟ ಗ್ರಾಮದ ಒಂದು ಸಾಮಾನ್ಯ ಕುಟುಂಬದಲ್ಲಿ ಜನಿಸಿದರು. ಬಾಲ್ಯದಿಂದಲೇ ಸುತ್ತಮುತ್ತಲಿನ ಸಾಮಾಜಿ-ಕ ಅಸಮಾನತೆ ಮತ್ತು ಶೋಷಣೆಯನ್ನು ಕಂಡು ಬೆಳೆದ ಇವರು, ಸಮಾಜದಲ್ಲಿ ಬದಲಾವಣೆ ತರಬೇಕೆಂಬ ಹಂಬಲ ಹೊಂದಿದ್ದರು. ಸಿದ್ಧಾಂತ ಮತ್ತು ಚಿಂತನೆ ಮಾನಸಯ್ಯ ಅವರು ಪ್ರಮುಖವಾಗಿ ಎರಡು ಸಿದ್ಧಾಂತಗಳ ಬೆಸುಗೆಯನ್ನು ಪ್ರತಿಪಾದಿಸಿದರು: ಮಾರ್ಕ್ಸ್ವಾದ ಆರ್ಥಿಕ ಸಮಾನತೆ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ. ಅಂಬೇಡ್ಕರ್ ವಾದ ಸಾಮಾಜಿಕ ನ್ಯಾಯ, ಜಾತಿ ನಿರ್ಮೂಲನೆ ಮತ್ತು ಘನತೆಯ ಬದುಕಿಗಾಗಿ. ಅವರು ಕೇವಲ ಸಿದ್ಧಾಂತಕ್ಕೆ ಸೀಮಿತವಾಗದೆ, ಅದನ್ನು ಬೀದಿ ಹೋರಾಟಕ್ಕೆ ತಂದವರು.

ರೈತ ಸಂಘದ ರಾಜ್ಯ ಅಧ್ಯಕ್ಷರಾಗಿ ಮತ್ತು ಹೋರಾಟದ ಹಾದಿ ಆರ್. ಮಾನಸಯ್ಯನವರು ಕರ್ನಾಟಕ ರಾಜ್ಯ ರೈತ ಸಂಘದ (KRRS) ಪ್ರಮುಖ ನಾಯಕರಾಗಿ ಸೇವೆ ಸಲ್ಲಿಸಿದವರು. ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ರೈತರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಅವರ ಪಾತ್ರ ದೊಡ್ಡದು. ಭೂಮಿ ಹಕ್ಕು ಸಾಗುವಳಿ ಮಾಡುತ್ತಿದ್ದ ಬಡ ರೈತರಿಗೆ ಮತ್ತು ದಲಿತ-ರಿಗೆ ಭೂಮಿಯ ಹಕ್ಕನ್ನು ಕೊಡಿಸಲು ಅವರು ನಿರಂತರವಾಗಿ ಶ್ರಮಿಸಿದರು. 'ಉಳುವವನೇ ಭೂಮಿಯ ಒಡೆಯ' ಎಂಬ ತತ್ವವನ್ನು ನಿಜವಾಗಿಸಲು ಅವರು ಬೀದಿಗಿಳಿದು ಹೋರಾಡಿದರು.

ಬೆಲೆ ಏರಿಕೆ ಮತ್ತು ಸಾಲಮನ್ನಾ ರೈತರ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಗಬೇಕು ಮತ್ತು ರೈತರ ಸಾಲಮನ್ನಾ ಆಗಬೇಕು ಎಂಬ ಆಗ್ರಹದೊಂದಿಗೆ ಹತ್ತಾರು ಪ್ರತಿಭಟನೆಗಳ ನೇತೃತ್ವ ವಹಿಸಿದ್ದರು. ನೀರಾವರಿ ಯೋಜನೆಗಳು ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಭಾಗದ ನೀರಾವರಿ ಸಮಸ್ಯೆಗಳ ಬಗ್ಗೆ ಮತ್ತು ತುಂಗಭದ್ರಾ ನದಿ ನೀರಿನ ಹಂಚಿಕೆ ವಿಷಯದಲ್ಲಿ ರೈತರ ಪರವಾಗಿ ಗಟ್ಟಿ ಧ್ವನಿ ಎತ್ತಿದ್ದರು. ಕಾರ್ಮಿಕ ಚಳವಳಿಯಲ್ಲಿ ಪಾತ್ರ: ಕಾರ್ಮಿಕರ ಹಕ್ಕುಗಳಿಗಾಗಿ ಅವರು ಮಾಡಿದ ಹೋರಾಟಗಳು ಐತಿಹಾಸಿಕ:

* ರಾಯಚೂರು ಉಷ್ಣ ವಿದ್ಯುತ್ ಸ್ಥಾವರ (RTPS): ಇಲ್ಲಿನ ಗುತ್ತಿಗೆ ಕಾರ್ಮಿಕರ ಖಾಯಂಗೆ ಮತ್ತು ಕನಿಷ್ಠ ವೇತನಕ್ಕಾಗಿ ಅವರು ದಶಕಗಳ ಕಾಲ ಹೋರಾಡಿದರು.
*ಗುತ್ತಿಗೆ ಪದ್ಧತಿ ವಿರೋಧ 'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬ ತತ್ವದಡಿ ಕಾರ್ಮಿಕರನ್ನು ಸಂಘಟಿಸಿದರು.

ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯಾ (TUCI) ಮೂಲಕ ರಾಜ್ಯಮಟ್ಟದಲ್ಲಿ ಕಾರ್ಮಿಕರ ಪರವಾಗಿ ಧ್ವನಿ ಎತ್ತಿದರು. ಭೂಹೀನ ದಲಿತರಿಗೆ ಮತ್ತು ಹಿಂದುಳಿದ ವರ್ಗಗಳಿಗೆ ಸರ್ಕಾರಿ ಜಮೀನು ಮಂಜೂರು ಮಾಡಿಸಲು ಅನೇಕ ಪಾದಯಾತ್ರೆಗಳನ್ನು ನಡೆಸಿದ್ದಾರೆ.

ಹಳ್ಳಿಗಳಲ್ಲಿ ನಡೆಯುತ್ತಿದ್ದ ಅಸ್ಪೃಶ್ಯತೆ ಮತ್ತು ಸಾಮಾಜಿಕ ಬಹಿಷ್ಕಾರಗಳ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸಿದವರು. ಪ್ರಗತಿಪರ ವೇದಿಕೆಗಳ ಮೂಲಕ ಜನಪರ ರಾಜ-ಕಾರಣವನ್ನು ಮುನ್ನೆಲೆಗೆ ತರಲು ಪ್ರಯತ್ನಿಸಿದರು.
*ಕರ್ನಾಟಕ ರಾಜ್ಯ ಕಾರ್ಮಿಕ ಸಂಘಟನೆಗಳ ಒಕ್ಕೂಟ.
*ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ.
*ದಲಿತ ಹಕ್ಕುಗಳ ಸಮಿತಿ.

ಮಾನಸಯ್ಯ ಅವರು ಕೇವಲ ಭಾಷಣ-ಕಾರರಲ್ಲ, ಉತ್ತಮ ಬರಹಗಾರರೂ ಹೌದು. ಅವರ ಲೇಖನಗಳು ಕಾರ್ಮಿಕರ ಸಮಸ್ಯೆಗಳು, ಜಾಗತೀಕರಣದ ದುಷ್ಪರಿಣಾಮಗಳು ಮತ್ತು ಸಂವಿಧಾನದ ಆಶಯಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

ಅವರ ಹೋರಾಟವನ್ನು ಗುರುತಿಸಿ ಅನೇಕ ಸಂಘ-ಸಂಸ್ಥೆಗಳು ಗೌರವಿಸಿವೆ. ಆದರೆ, ಅವರು ಯಾವಾಗಲೂ "ಜನರ ಪ್ರೀತಿ ಮತ್ತು ಕಾರ್ಮಿಕರ ಬೆಂಬಲವೇ ದೊಡ್ಡ ಪ್ರಶಸ್ತಿ" ಎಂದು ನಂಬಿದ್ದರು. ಇಂದಿನ ಕಾಲಘಟ್ಟದಲ್ಲಿ ಕಾರ್ಮಿಕ ಕಾಯ್ದೆಗಳು ಬದಲಾಗುತ್ತಿರುವಾಗ ಮತ್ತು ಶೋಷಿತರ ಧ್ವನಿ ಅಡಗುತ್ತಿರುವಾಗ, ಆರ್. ಮಾನಸಯ್ಯ ಅವರಂತಹ ಹೋರಾಟಗಾರರ ಅಗತ್ಯತೆ ಹೆಚ್ಚಿದೆ. ಅವರ ಬದುಕು ಹೋರಾಟದ ಹಾದಿಯಲ್ಲಿರುವ ಯುವಕರಿಗೆ ದೊಡ್ಡ ಸ್ಫೂರ್ತಿ.

ನೇಮಕಾತಿ ಪ್ರಕಟಣೆ

CEL ನೇಮಕಾತಿ 2026: 34 ಡೆಪ್ಯೂಟಿ ಜನರಲ್ ಮ್ಯಾನೇಜರ್ ಮತ್ತು ಎಂಜಿನಿಯರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸೆಂಟ್ರಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಫೆಬ್ರವರಿ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಡೆಪ್ಯೂಟಿ ಜನರಲ್ ಮ್ಯಾನೇಜರ್ ಮತ್ತು ಎಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹೈದರಾಬಾದ್ – ತೆಲಂಗಾಣ, ಬೆಂಗಳೂರು – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 03–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು (14–03–2026 ರವರೆಗೆ ವಿಸ್ತರಿಸಲಾಗಿದೆ) ಅಧಿಕೃತ ವೆಬ್‌ಸೈಟ್: celindia.co.in

ವಿದ್ವತ್ಪೂರ್ಣ ಬರವಣಿಗೆಯಲ್ಲಿ ಸಂಶೋಧನೆಯ ಪ್ರಸ್ತುತತೆ ಕುರಿತ ವಿಶೇಷ ಉಪನ್ಯಾಸ

ನೈಜ್ಯ ದೆಸೆ ನ್ಯೂಸ್

ಸಂಶೋಧನಾ ವಿಷಯವು ಸಾಮಾಜಿಕವಾಗಿ ಪ್ರಸ್ತುತ ಮತ್ತು ಸಂದರ್ಭೋಚಿತವಾಗಿರಬೇಕು. ಸಂಶೋಧನಾ ವಿಷಯವನ್ನು ಆಯ್ಕೆ ಮಾಡುವಾಗ ಸಂಶೋಧಕರು ಅದರ ಪ್ರಸ್ತುತತೆ ಮತ್ತು ಸಮಾಜದಲ್ಲಿರುವ ಸಮಸ್ಯೆ ಪರಿಗಣನೆಗೆ ತೆಗೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಟಿ.ಆರ್.ಸುಬ್ರಹ್ಮಣ್ಯ ಹೇಳಿದರು.

ಕಲಬುರಗಿ ಕರ್ನಾಟಕ ಕೇಂದ್ರೀಯ ವಿವಿಯಲ್ಲಿ ವಿದ್ಯಾರ್ಥಿ ಕಲ್ಯಾಣಾಧಿಕಾರಿ ಕಚೇರಿ ಸೋಮವಾರ ಆಯೋಜಿಸಿದ್ದ ವಿದ್ವತ್ಪೂರ್ಣ ಬರವಣಿಗೆಯಲ್ಲಿ ಸಂಶೋಧನೆಯ ಪ್ರಸ್ತುತತೆ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ಸಂಶೋಧನೆ ಪ್ರಮುಖ ಪಾತ್ರ:ಐತಿಹಾಸಿಕವಾಗಿ ಸಂಶೋಧನೆಯು ಪ್ರಪಂಚದಾದ್ಯಂತ ಸಾಮಾಜಿಕ ಸುಧಾರಣೆ ಮತ್ತು ಕಾನೂನು ಬೆಳವಣಿಗೆ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. 16ನೇ ಶತಮಾನದ ವಿದ್ವಾಂಸರ ಸಂಶೋಧನಾ ಕಾರ್ಯಗಳು ಜಗತ್ತಿನ ಪ್ರಮುಖ ಕಾನೂನು ಸುಧಾರಣೆಗಳಿಗೆ ಕೊಡುಗೆ ನೀಡಿವೆ. ಸಂಶೋಧನೆಯು ನಿಜವಾದ ಸಾಮಾಜಿಕ ಸವಾಲುಗಳನ್ನು ಪರಿಹರಿಸಬೇಕು. ಅರ್ಥಪೂರ್ಣ ನೀತಿ ಮತ್ತು ಕಾನೂನು ಬದಲಾವಣೆಗೆ ಕೊಡುಗೆ ನೀಡಬೇಕು. ಸಂಪನ್ಮೂಲಗಳ ಕೊರತೆಯ ಹೊರತಾಗಿಯೂ, ನಮ್ಮ ಹಿಂದಿನ ಸಂಶೋಧಕರು ಪ್ರಾಮಾಣಿಕತೆ ಮತ್ತು ಬದ್ಧತೆಯೊಂದಿಗೆ ಪರಿಣಾಮಕಾರಿ ಕೃತಿ ರಚಿಸಿದ್ದಾರೆ. ವಿದ್ವಾಂಸರು ಹಿಂದಿನ ಸಂಶೋಧಕರೊಂದಿಗೆ ಧನಾತ್ಮಕ ಭಿನ್ನಾಭಿಪ್ರಾಯ ಹೊಂದದ ಹೊರತು ಹೊಸ ಜ್ಞಾನ ಸೃಷ್ಟಿಸಲು ಸಾಧ್ಯವಿಲ್ಲ. ಭಾರತದಲ್ಲಿ ಕ್ರಿಯಾಶೀಲ ಸಂಶೋಧನಾ ಕಾರ್ಯಗಳು ನಿರ್ಭಯಾ ತಿದ್ದುಪಡಿ ಕಾಯ್ದೆ ಮತ್ತು ಕಾನೂನು ನೆರವು, ಪರಿಹಾರ ಮತ್ತು ಕಾನೂನುಗಳ ಪ್ರಾಯೋಗಿಕ ಅನುಷ್ಠಾನದಂತಹ ಕಾನೂನು ಸುಧಾರಣೆಗಳಿಗೆ ಕಾರಣವಾಗಿವೆ ಎಂದು ಹೇಳಿದರು.ಸುಸ್ಥಿರ ಚಿಂತನೆ ಚರ್ಚೆ:ಪ್ರೊ.ಸುಬ್ರಹ್ಮಣ್ಯ ಅವರು ಅಂತರ–ಪೀಳಿಗೆಯ ಸಮಾನತೆಯ ಪರಿಕಲ್ಪನೆ ಮತ್ತು ಸಂಶೋಧನೆಯಲ್ಲಿ ಸುಸ್ಥಿರ ಚಿಂತನೆಯ ಪ್ರಾಮುಖ್ಯತೆ ಕುರಿತು ಚರ್ಚಿಸಿ, ಜಲಪೈಗು–ರಿಯಲ್ಲಿ ನಡೆದ ವಾಮಾಚಾರಕ್ಕೆ ಸಂಬಂಧಿಸಿದ ಘಟನೆಗಳನ್ನು ಅವರು ಮನವೊಲಿಸುವ ಮತ್ತು ಸಾಮಾಜಿಕವಾಗಿ ಪ್ರಭಾವ ಬೀರುವ ಸಂಶೋಧನೆಯ ಉದಾಹರಣೆಯಾಗಿ ಉಲ್ಲೇಖಿಸಿದರು. ಪ್ರಸ್ತುತ ಹಾಗು ಪ್ರಮುಖ ಜಾಗತಿಕ ಸಮಸ್ಯೆಗಳ ಕುರಿತು ಅಧ್ಯಯನ ಕೈಗೊಳ್ಳಲು ವಿದ್ವಾಂಸರನ್ನು ಪ್ರೋತ್ಸಾಹಿಸಿದರು. ವಿದ್ವಾಂಸರು ಸಂಶೋಧನಾ ಕರ್ತೃತ್ವವನ್ನು ಅಭಿವೃದ್ಧಿಪಡಿಸಲು, ಅಸ್ತಿತ್ವದಲ್ಲಿರುವ ವ್ಯವಸ್ಥೆ ಪ್ರಶ್ನಿಸಲು, ಅನ್ವೇಷಿಸಲು ಮತ್ತು ವಿಮರ್ಶಾತ್ಮಕವಾಗಿ ವಿಶ್ಲೇಷಿಸುವಂತೆ ಒತ್ತಾಯಿಸಿದರು. ಗೌರವ ಅತಿಥಿಯಾಗಿದ್ದ ಸಿಯುಕೆಯ ಕುಲಸಚಿವ ಪ್ರೊ.ಆರ್.ಆರ್.ಬಿರಾದಾರ್ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸಿಯುಕೆ ಕಾನೂನು ಅಧ್ಯಯನ ನಿಕಾಯದ ಡೀನ್ ಪ್ರೊ.ಬಸವರಾಜ್ ಎಂ. ಕುಬಕಡ್ಡಿ ಮಾತನಾಡಿ, ಕಾನೂನು ಸಂಶೋಧನೆಯು ಸಾಮಾಜಿ–ಕ ಅಗತ್ಯಗಳಿಗೆ ಕೊಡುಗೆ ನೀಡಬೇಕು. ಕಲಬುರಗಿ ಪ್ರದೇಶದಲ್ಲಿ 11ನೇ ಶತಮಾನದಲ್ಲಿ ಜನಿಸಿದ ಕಾನೂನು ವಿದ್ವಾಂಸರಾದ ಸಂತ ವಿಜ್ಞಾನೇಶ್ವರರು ಸಮಾಜ ಸುಧಾರಕರಾಗಿದ್ದು, ಸಮಾಜದ ಸುಧಾರಣೆಗೆ ಶ್ರಮಿಸಿದರು. 12ನೇ ಶತಮಾನದಲ್ಲಿ ಭಗವಾನ್ ಬಸವೇಶ್ವರರು ತಮ್ಮ ವಚನಗಳ ಮೂಲಕ ಆ ಕಾಲದ ಸಾಮಾಜಿಕ ಅನಿಷ್ಠವಾಗಿದ್ದ ತಾರತಮ್ಯ ನಿರ್ಮೂಲನೆ ಮಾಡಲು ಪ್ರಯತ್ನಿಸಿದರು. ಪ್ರತಿಯೊಬ್ಬ ಕಾನೂನು ವಿದ್ವಾಂಸರು ಸಮಾಜದ ಸುಧಾರಣೆಗೆ ಕೊಡುಗೆ ನೀಡುವ ರೀತಿಯಲ್ಲಿ ಕೆಲಸ ಮಾಡಬೇಕು ಎಂದರು.ವಿದ್ಯಾರ್ಥಿ ಕಲ್ಯಾಣ ಇಲಾಖೆಯ ಸಹಾಯಕ ಡೀನ್ ಡಾ.ಮಲ್ಲಿಕಾರ್ಜುನ್ ಹೂಗರ್ ಸ್ವಾಗತಿಸಿದರು, ಡಾ. ಕೆ.ಎಂ.ಕೃಷ್ಣ ಶೇಖರ್ ಶರ್ಮಾ ನಿರೂಪಿಸಿದರು, ಡಾ.ಜಗದೀಶ್ ಚಂದ್ರ ಟಿ.ಜಿ. ಸಂಪನ್ಮೂಲ ವ್ಯಕ್ತಿಯನ್ನು ಪರಿಚಯಿಸಿದರು. ಮುಖ್ಯ ವಾರ್ಡನ್ ಡಾ. ಬಸವರಾಜ್ ಎಂ.ಎಸ್. ವಂದಿಸಿದರು. ಶಿಕ್ಷಕರು, ಸಂಶೋಧನಾರ್ಥಿಗಳು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು. " ಸಂಶೋಧನೆಯ ಗುಣಮಟ್ಟ ಬಹಳ ಮುಖ್ಯ. ಸಂಶೋಧನೆಯಲ್ಲಿ ಗುಣಮಟ್ಟ, ಸ್ವಂತಿಕೆ ಮತ್ತು ಪ್ರಭಾವಶಾಲಿ ಪಾಂಡಿತ್ಯದ ಮೇಲೆ ಕೇಂದ್ರೀಕರಿಸುವುದು ಇಂದಿನ ತುರ್ತು ಅಗತ್ಯ.

ಅಭಿವೃದ್ಧಿ ಕಾರ್ಯಗಳಿಗೆ ಎಲ್ಲರೂ ಸಹಕರಿಸೋಣ: ಬಸನಗೌಡ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಶಾಸಕ ಅಪ್ಪಾಜಿ ನಾಡಗೌಡರು ನಮ್ಮ ಗ್ರಾಮಕ್ಕೆ ಸಾಕಷ್ಟು ಅನುದಾನವನ್ನು ಕೊಟ್ಟು ಕೆಲಸ ಮಾಡಿಸಿದ್ದಾರೆ, ಸದರಿ ರಸ್ತೆ ನಮ್ಮೆಲ್ಲರ ಬಹುದಿನಗಳ ಬೇಡಿಕೆಯಾಗಿತ್ತು ಇವತ್ತು ಅವರ ಪರವಾಗಿ ಭೂಮಿ ಪೂಜೆ ನೆರವೇರಿಸಿದ್ದೇನೆ ಕಾಮಗಾರಿ ಆದಷ್ಟು ಬೇಗ ಮುಗಿಯಲು ಎಲ್ಲರೂ ಸಹಕರಿಸಬೇಕು ಎಂದು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಬಸನಗೌಡ ಹಡಲಗೇರಿ ಹೇಳಿದರು.

ತಾಲೂಕಿನ ಕೊಣ್ಣೂರ ಗ್ರಾಮದಲ್ಲಿ ಜಿಪಂ ವಿಜಯಪುರ ಸನ್ 2025–26 ನೇ ಸಾಲಿನ ಲೆಕ್ಕ ಶಿರ್ಷಿಕೆ 5054ರಡಿ ರೂ. 100 ಲಕ್ಷ ಮೊತ್ತದ ಎಸ್.ಸಿ.ಕಾಲೋನಿಯ ಸಿ.ಸಿ.ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಶಾಸಕ

ನಾಡಗೌಡರು ಅಭಿವೃದ್ಧಿಪರ ಚಿಂತಕರಾಗಿದ್ದು ಅವರೆಂದೂ ಪ್ರಚಾರ ಬಯಸಿದವರಲ್ಲ, ಸರಳ ಸಜ್ಜನ ವ್ಯಕ್ತಿಗಳಾಗಿದ್ದು ಎಲ್ಲರನ್ನೂ ಜೊತೆಗೂಡಿಸಿಕೊಂಡು ಹೋಗುವರಾಗಿದ್ದಾರೆ. ನಮ್ಮ ಗ್ರಾಮದ ಕುರಿತು ವಿಶೇಷ ಆಸಕ್ತಿ ಹೊಂದಿರುವ ಅವರು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುದಾನ ಕೊಡುವವ–ರಿದ್ದಾರೆ ಅವರಿಗೆ ನಾವೆಲ್ಲರೂ ಶಕ್ತಿ ತುಂಬವ ಕೆಲಸ ಮಾಡೋಣ ಎಂದರು.

ಕೆ.ಆರ್.ಐ.ಡಿ.ಎಲ್. ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಆನಂದ ಸ್ವಾಮಿ ಅವರು ಮಾತನಾಡಿ ಸದರಿ ರಸ್ತೆಯು 5 ಮೀಟರ್ ಅಗಲ ಹಾಗೂ 1 ಕಿಲೋಮೀಟರ ಉದ್ದದಾಗಿದ್ದು 100 ಲಕ್ಷ ಮೊತ್ತದಾಗಿದೆ. ರಸ್ತೆ ಎರಡೂ ಪಕ್ಕದಲ್ಲಿ ಚರಂಡಿ ಮಾಡಿಸಿಕೊಡಲು ಬೇಡಿಕೆದ್ದು ಮುಂದಿನ ಅನುದಾನದಲ್ಲಿ ಇದನ್ನು ಮಾಡಿಕೊಡಲಾಗುವುದು. ಸದರಿ ರಸ್ತೆ ಗುಣಮಟ್ಟದ್ದಾಗಿರುವಂತೆ ನೋಡಿಕೊಳ್ಳಲಾಗುವುದು ಇದಕ್ಕೆ ಎಲ್ಲರ ಸಹಕಾರ ಇರಲಿ ಎಂದರು. ಭೂಮಿ ಪೂಜಾ ಸಮಾರಂಭದಲ್ಲಿ ಗಣ್ಯರಾದ ಮುದೇಪ್ಪಗೌಡ ಹಡಲಗೇರಿ, ಜಿ.ಜಿ. ಪಾಟೀಲ, ಮುತ್ತುಗೌಡ ಹಿಪ್ಪರಗಿ, ಅಶೋಕ ಬಿರಾದಾರ, ಶಿವನಗೌಡ ಚೌಧರಿ, ಶರಣಗೌಡ ದೇಶಮುಖ,ಬಿ.ಸಿ.ಪಾಟೀಲ,ಸಂಗನಗೌಡ ಅಸ್ಕಿ,ಸಂಗಮೇಶ ದೇಸಾಯಿ, ಅಬ್ದುಲ್ ರೆಹಮಾನ ಅವಟಿ, ಜಿ.ಎಸ್.ಐನಾಪೂರ, ಹುಸೇನ ವಾಲಿಕಾರ, ಸುರೇಶ ನೀರಲಗಿ, ಅಭಿಯಂತರ ಸಚೀನ ಮುಳಗಿ, ಸಾಹೇಬಗೌಡ ಬಿರಾದಾರ ಹಾಗೂ ಗ್ರಾಮಸ್ಥರು ಇದ್ದರು.

ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷ ಪೂರೈಸಿದ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕ ಹಂಪನಗೌಡ ಬಾದರ್ಲಿ ಹಾಗೂ ಶಾಸಕ ವಸಂತಕುಮಾರ್ ಅವರಿಂದ ಅಭಿನಂದನೆ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: (ಬೆಂಗಳೂರು) ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (KPCC) ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡು ಯಶಸ್ವಿಯಾಗಿ ಆರು ವರ್ಷಗಳನ್ನು ಪೂರೈಸಿರುವ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರನ್ನು ಸಿಂಧನೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ ಹಾಗೂ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ವಸಂತಕುಮಾರ್ ಅವರು ಇಂದು ಬೆಂಗಳೂರಿನಲ್ಲಿ ಭೇಟಿ ಮಾಡಿ ಆತ್ಮೀಯವಾಗಿ ಅಭಿನಂದಿಸಿದರು.

ಕಳೆದ ಆರು ವರ್ಷಗಳಲ್ಲಿ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ, ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭೂತಪೂರ್ವ ಗೆಲುವಿಗೆ ಕಾರಣ–ರಾದ ಡಿ.ಕೆ. ಶಿವಕುಮಾರ್ ಅವರ ಶ್ರಮವನ್ನು ಈ ಸಂದರ್ಭದಲ್ಲಿ ಶಾಸಕರು ಶ್ಲಾಘಿಸಿದರು. ಅಭಿನಂದನೆ ಸಲ್ಲಿಸುವ ಜೊತೆಗೆ, ಸಿಂಧನೂರು ವಿಧಾನಸಭಾ ಕ್ಷೇತ್ರದ ನೀರಾವರಿ ಯೋಜನೆಗಳು, ರಸ್ತೆ ಅಭಿವೃದ್ಧಿ ಹಾಗೂ ಕ್ಷೇತ್ರದ ವಿವಿಧ ಪ್ರಗತಿಪರ ಕೆಲಸಗಳ ಕುರಿತು ಶಾಸಕ ಹಂಪನಗೌಡ ಬಾದರ್ಲಿ ಅವರು ಉಪ ಮುಖ್ಯಮಂತ್ರಿಗಳೊಂದಿಗೆ ಸುದೀರ್ಘ ಚರ್ಚೆ ನಡೆಸಿದರು.

ಪಕ್ಷದ ಕಾರ್ಯಕರ್ತರಲ್ಲಿ ಹೊಸ ಚೈತನ್ಯ ತುಂಬುವಲ್ಲಿ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದ ಪಾತ್ರ ದೊಡ್ಡದು ಎಂದು ಎಂ.ಎಲ್.ಸಿ ವಸಂತಕುಮಾರ್ ಅವರು ಹಾರೈಸಿದರು. ಡಿ.ಕೆ. ಶಿವಕುಮಾರ್ ಅವರ ಸಂಘಟನಾ ಚಾತುರ್ಯ ಮತ್ತು ಕಾರ್ಯಕ್ಷಮತೆ ರಾಜ್ಯದ ಕಾಂಗ್ರೆಸ್ ಪಕ್ಷಕ್ಕೆ ಭದ್ರವಾದ ಬುನಾದಿ ಹಾಕಿಕೊಟ್ಟಿದೆ. ಅವರ ಮುಂದಿನ ರಾಜಕೀಯ ಜೀವನವು ಹೀಗೆಯೇ ಯಶಸ್ವಿಯಾಗಿ ಸಾಗಲಿ," ಎಂದು ಶಾಸಕ ಹಂಪನಗೌಡ ಬಾದರ್ಲಿ ಶುಭ ಹಾರೈಸಿದರು.

ಕೇಂದ್ರ ಸಚಿವರಿಗೆ ಸಂಸದ ಜಿ. ಕುಮಾರ್ ನಾಯಕರ ಪತ್ರ

ನೈಜ್ಯ ದೆಸೆ ನ್ಯೂಸ್

ನವದೆಹಲಿ: ಸಂಸದರಾದ ಜಿ. ಕುಮಾರ್ ನಾಯಕ ಅವರು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರಾದ ವೀರೇಂದ್ರ ಕುಮಾರ್ ಅವರಿಗೆ ಪತ್ರ ಬರೆದು, ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಶೈಕ್ಷಣಿಕ ಸಂಸ್ಥೆಗಳಲ್ಲಿನ ಆಸನಗಳ ಮತ್ತು ರಾಜ್ಯ ಸೇವೆಗಳಲ್ಲಿನ ನೇಮಕಾತಿಗಳ ಮೀಸಲು) ಅಧಿನಿಯಮ, 2022 ಅನ್ನು ಭಾರತ ಸಂವಿಧಾನದ ಒಂಬತ್ತನೇ ಅನುಕ್ರಮಣಿಕೆ (Ninth Schedule) ಯಲ್ಲಿ ಸೇರಿಸಲು ತುರ್ತು ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.



ಕರ್ನಾಟಕ ಸರ್ಕಾರದಿಂದ ಅಂಗೀಕ–ರಿಸಲ್ಪಟ್ಟ ಈ ಕಾಯ್ದೆ ರಾಜ್ಯದಲ್ಲಿ ಪರಿಶಿಷ್ಟ ಜಾತಿ (SC) ಹಾಗೂ ಪರಿಶಿಷ್ಟ ಪಂಗಡ (ST) ಸಮುದಾಯಗಳಿಗೆ ಶೈಕ್ಷಣಿಕ ಸಂಸ್ಥೆಗಳು ಹಾಗೂ ಸರ್ಕಾರಿ ಉದ್ಯೋಗಗಳಲ್ಲಿ ಹೆಚ್ಚುವರಿ ಮೀಸಲು ಕಲ್ಪಿಸುವ ಉದ್ದೇಶ ಹೊಂದಿದೆ. ಆದರೆ ಈ ಕಾಯ್ದೆಯನ್ನು ಸಂವಿಧಾನದ ಒಂಬತ್ತನೇ ಅನುಕ್ರಮಣಿಕೆಯಲ್ಲಿ ಸೇರಿಸುವ ಪ್ರಸ್ತಾವನೆ ಮೂರು ವರ್ಷಗಳಿಗಿಂತ ಹೆಚ್ಚು ಕಾಲದಿಂದ ಕೇಂದ್ರ ಸರ್ಕಾರದ ಮಟ್ಟದಲ್ಲಿ ನಿರ್ಣಯವಾಗದೆ ಬಾಕಿ ಉಳಿದಿರುವುದಾಗಿ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಈ ಕುರಿತು ತ್ವರಿತ ನಿರ್ಧಾರ ಕೈಗೊಳ್ಳದಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಿಗೆ ನೀಡಬೇಕಾದ ಸಂವಿಧಾನಾತ್ಮಕ ರಕ್ಷಣೆಯು ಹಾಗೂ ಸಾಮಾಜಿಕ ನ್ಯಾಯದ ಆಶಯಗಳು ವಿಳಂಬವಾಗುವ ಸಾಧ್ಯತೆ ಇದೆ ಎಂದು ಸಂಸದರು ಆತಂಕ ವ್ಯಕ್ತಪಡಿಸಿದ್ದಾರೆ. ಹಾಗೆಯೇ, ರಾಜ್ಯ ಸರ್ಕಾರದ ಈ ಬಹುಕಾಲದ ಬೇಡಿಕೆಯನ್ನು ಪರಿಗಣಿಸಿ ಪ್ರಸ್ತುತ ನಡೆಯುತ್ತಿರುವ ಸಂಸತ್ ಅಧಿವೇಶನದಲ್ಲಿಯೇ ಈ ವಿಷಯವನ್ನು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರವು ಈ ವಿಷಯಕ್ಕೆ ಅಗತ್ಯ ಪ್ರಾಮುಖ್ಯತೆ ನೀಡಬೇಕೆಂದು ತಮ್ಮ ಪತ್ರದಲ್ಲಿ ವಿನಂತಿಸಿಕೊಂಡಿದ್ದಾರೆ.

ಗರ್ಭಕಂಠದ ಕ್ಯಾನ್ಸರ್ ತಡೆಗೆ 14 ವರ್ಷದ ಹೆಣ್ಣು ಮಕ್ಕಳಿಗೆ ತಪ್ಪದೆ ಉಚಿತ ಹೆಚ್‌ಪಿವಿ ಲಸಿಕೆ ಹಾಕಿಸಿ:ಡಾ ನಂದಿತಾ ಎಮ್ ಎನ್.

ನೈಜ್ಯ ದೆಸೆ ನ್ಯೂಸ್

ಹೆಣ್ಣು ಮಕ್ಕಳ ಜೀವನದಲ್ಲಿ ಗಂಭೀರ ಆರೋಗ್ಯ ಸಮಸ್ಯೆಯನ್ನುಂಟು ಮಾಡುವ "ಗರ್ಭಕಂಠದ ಕ್ಯಾನ್ಸರ್" ತಡೆಗೆ 14 ವರ್ಷದ ಹೆಣ್ಣು ಮಕ್ಕಳಿಗೆ ದಿನಾಂಕ 11.03.2026 ರಂದು ಜಿಲ್ಲೆಯಲ್ಲಿ ಉಚಿತ ಹೆಚ್‌ಪಿವಿ 'ಹ್ಯೂಮನ್ ಪ್ಯಾಪಿಲೋಮ ವೈರಸ್' ವಿರುದ್ಧದ ಲಸಿಕೆಯನ್ನು ಹಾಕಲಾಗುತ್ತಿದ್ದು, ಪಾಲಕರು ತಮ್ಮ ಮಕ್ಕಳಿಗೆ ತಪ್ಪದೆ ಹಾಕಿಸಲು ಹತ್ತಿರದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್ ಮನವಿ ಮಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಅಡಿಯಲ್ಲಿ ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 14 ವರ್ಷದ ಹೆಣ್ಣು ಮಕ್ಕಳಿಗೆ ಹಾಕುವ ಹೆಚ್‌ಪಿವಿ ಲಸಿಕೆ ಜಾಗೃತಿ ಕು–ರಿತು ಸಿಯಾತಲಾಬ್ ಸರಕಾರಿ ಪ್ರೌಢಶಾಲೆಯಲ್ಲಿ ಪಾಲಕರ ಸಭೆಯಲ್ಲಿ ಮಾತನಾಡುತ್ತಾ, ಸಾಮಾನ್ಯವಾಗಿ ವೈಯಕ್ತಿಕ ಶುಚಿತ್ವ, ಜನನಾಂಗಗಳಲ್ಲಿ ತೊಂದರೆ, ಹುಣ್ಣು, ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುವ ಹ್ಯೂಮನ್ ಪ್ಯಾಪಿಲೋಮ ವೈರಸ್ (ಹೆಚ್‌ಪಿವಿ) ಸೋಂಕು ಕ್ರಮೇಣ ಗರ್ಭಕಂಠದ ಜೀವಕೋಶಗಳಲ್ಲಿ ಬದಲಾವಣೆಗಳಾಗಿ ಕ್ಯಾನ್ಸರ್‌ರಾಗಿ ಬದಲಾಗುತ್ತದೆ.

ಈ ಹಿನ್ನಲೆಯಲ್ಲಿ ಆರೋಗ್ಯಕ್ಕೆ ಮಾರಕವಾಗುವುದನ್ನು ತಡೆಯಲು ಹೆಚ್‌ಪಿವಿ ಲಸಿಕೆಯನ್ನು ಮಾರ್ಗಸೂಚಿಯಡಿ 14 ವರ್ಷದ ಹೆಣ್ಣುಮಕ್ಕಳಿಗೆ ಉಚಿತವಾಗಿ ಹಾಕಲಾಗುತ್ತಿದ್ದು ಇದರ ಸದುಪಯೋಗ ಪಡೆದುಕೊಳ್ಳಲು ಹತ್ತಿರದ ಆರೋಗ್ಯ ಕೇಂದ್ರಗಳಿಗೆ ಬೇಟಿ ನೀಡುವಂತೆ ವಿನಂತಿಸಿದರು. ಈ ಸಂದರ್ಭದಲ್ಲಿ ಸಿಯಾತಲಾಬ್ ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ ಗುಂಡಮ್ಮ, ಜಿಲ್ಲಾ ಆರೋಗ್ಯ ಶಿಕ್ಷಣಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಶಾಲಾ ಮುಖ್ಯೋಪಾದ್ಯಾಯರು ವಿ ಕೆ ಜೋಷಿ, ಕ್ಷೇತ್ರ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಅನೀತಾ, ಆರೋಗ್ಯ ನಿರೀಕ್ಷಣಾಧಿಕಾರಿ ಬಸವರಾಜ್, ಆಶಾ ಕಾರ್ಯಕರ್ತೆಯ ವಿಜಯಾ ಸೇರಿದಂತೆ ಶಿಕ್ಷಕರು, ಪಾಲಕರು, ಮಕ್ಕಳು ಉಪಸ್ಥಿತರಿದ್ದರು.

ಸರ್ಕಾರಿ ಜಾಗ ಒತ್ತುವರಿ ತೆರವಿಗೆ ಡಿಎಸ್‌ಎಸ್ ಆಗ್ರಹ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಸರಕಾರಿ ಜಾಗವನ್ನು ಖಾಸಗಿ ವ್ಯಕ್ತಿಯೊಬ್ಬರು ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಿ, ಹದ್ದುಬಸ್ತು ಮಾಡಿ ನಿವೇಶನ ರಹಿತರಿಗೆ ಹಂಚಿಕೆ ಮಾಡಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯಿಂದ ತಹಸೀಲ್ದಾರ್ ಮಂಜುನಾಥ ಭೋಗಾವತಿಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಮಲ್ಲಯ್ಯ ಬಳ್ಳಾ ಮಾತನಾಡಿ ಮೆದಿಕಿನಾಳ ಗ್ರಾಮದ ಸ.ನಂ. 10 ಮತ್ತು 11ರಲ್ಲಿ 5–16 ಗುಂಟೆ ಜಮೀನನ್ನು ಭೂ ಪರಿವರ್ತನೆ ಮಾಡಿಸಿದ್ದಾರೆ. ಸ.ನಂ. 11ರಲ್ಲಿ ಸುಮಾರು 3–20 ಗುಂಟೆ ಸರ್ಕಾರಿ ಜಮೀನು ಇದ್ದು, ಅದರ ಜತೆಗೆ ಇನ್ನೊಂದು ಪಕ್ಕದಲ್ಲಿ ಗ್ರಾಮಠಾಣಾ ಜಾಗವಿದ್ದು ಅವುಗಳನ್ನು ಒತ್ತುವರಿ ಮಾಡಿಕೊಂಡು ಬಡಾವಣೆ ನಿರ್ಮಿಸಿಕೊಂಡಿದ್ದಾರೆ. ಕೂಡಲೇ ಸ.ನಂ. 10

ಮತ್ತು 11 ಹಾಗೂ ಗ್ರಾಮಠಾಣಾ ಜಾಗವನ್ನು ಸಂಪೂರ್ಣ ಸರ್ವೇ ಮಾಡಿ ಹದ್ದುಬಸ್ತ್ ಮಾಡಿ ಉಳಿದ ಸರ್ಕಾರಿ ಜಾಗದಲ್ಲಿ ಮಹಿಳೆಯರಿಗೆ ಹೈಟೆಕ್ ಮಹಿಳಾ ಶೌಚಾಲಯ ಮತ್ತು ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಬೇಕೆಂದರು. ನಂತರ ಹನುಮಂತಪ್ಪ ವೆಂಕಟಾಪೂರ ಮಾತನಾಡಿ 2007ರಲ್ಲಿ ಸರ್ಕಾರ ಜಾರಿಗೆ ತಂದಿರುವ ಕರ್ನಾಟಕ ಭೂ ಕಬಳಿಕೆ ಪ್ರತಿಬಂಧಕ ಕಾಯ್ದೆ ಇದ್ದು, ಉಪಯೋಗಕ್ಕೆ ಬರುತ್ತಿಲ್ಲ.

ಖಾಗಿ ವ್ಯಕ್ತಿಯೊಬ್ಬರು ಸರಕಾರಿ ಭೂಮಿಯನ್ನು ಮಾರಾಟ ಮಾಡಲು ಹೇಗೆ ಸಾಧ್ಯ? ಸರ್ಕಾರಿ ಭೂಮಿ, ಗ್ರಾಮಠಾಣಾ ದಾಖಲೆಗಳನ್ನು ಉಪನೋಂದಾಣಾಧಿಕಾರಿಗಳು ಹೇಗೆ ಒಪ್ಪಿಕೊಳ್ಳುತ್ತಾರೆ? ಇದರಲ್ಲಿ ಸ್ಥಳೀಯ ಭ್ರಷ್ಟ ಅಧಿಕಾರಿಗಳು ಪಾಲುದಾರಿಕೆಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಶಾಮೀಲು ಆಗಿದ್ದಾರೆ ಎಂದು ಆರೋಪಿಸಿದರು. ಸುಮಾರು 20 ವರ್ಷಗಳಿಂದ ಇದ್ದ ಮಹಿಳಾ ಸಾರ್ವಜನಿಕ ಶೌಚಾಲಯವನ್ನು ನೆಲಸಮಗೊಳಿಸಿದ್ದಾರೆ. ಇದರಿಂದ ಮಹಿಳೆಯರು ಸಮಸ್ಯೆಯನ್ನು ಅನುಭವಿಸುತ್ತಿದ್ದು, ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಿಕೊಡಬೇಕೆಂದು ಒತ್ತಾಯಿಸಿದರು.

ಬೇಡಿಕೆ: ಸರ್ವೆ ನಂಬರ್ 10ರ ಸುತ್ತಾ–ಮುತ್ತಾ ಇರುವ ಜಾಗವನ್ನು ಸರ್ವೇ ಮಾಡಿ ಒತ್ತುವರಿಯಾದ ಜಾಗವನ್ನು ತೆರವುಗೊಳಿಸಿ ಹದ್ದುಬಸ್ತ್ ಮಾಡಬೇಕು,

ಸರ್ಕಾರಿ ಕಂದಾಯ ಭೂಮಿಯನ್ನು ಒತ್ತುವರಿ ಮಾಡುವಲ್ಲಿ ಸಹಕರಿಸಿದ ಕಂದಾಯ ನೀರಿಕ್ಷಕರು, ಗ್ರಾಮ ಆಡಳಿತಾಧಿಕಾರಿ, ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಬೇಕು, ಸರ್ಕಾರಿ ಜಾಗದಲ್ಲಿ ಹೈಟೆಕ್ ಮಹಿಳಾ ಶೌಚಾಲಯ ನಿರ್ಮಿಸಿ ಉಳಿದ ಜಾಗವನ್ನು ಗ್ರಾಮದ ಎಲ್ಲಾ ಜಾತಿಯ ನಿವೇಶನ ರಹಿತರಿಗೆ ಹಂಚಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಗೋಪಾಲಪ್ಪ ಪೂಜಾರಿ, ಮೌನೇಶ ಸುಲ್ತಾನಪೂರು, ಶರಣಪ್ಪ ಕಟ್ಟಿಮನಿ, ದಾನಪ್ಪ ಮೆದಿಕಿನಾಳ, ಸಂಪತ್‌ರಾಯ, ನಾಗರಾಜ, ಹನುಮಂತ ಮೆದಿಕಿನಾಳ, ಹನುಮಂತ ಹಂಪನಾಳ, ಶಿವಕಾಂತ, ಲಕ್ಕಪ್ಪ, ಬಸವರಾಜ ಸೇರಿದಂತೆ ಇನ್ನಿತರರಿದ್ದರು.

ಶಿಕ್ಷಣ ಮಾರ್ಗದರ್ಶಿ ವಿಶೇಷ

ಮೆಕ್ಯಾನಿಕಲ್ ಎಂಜಿನಿಯರಿಂಗ್

ಮೆಕ್ಯಾನಿಕಲ್ ಎಂಜಿನಿಯರಿಂಗ್ (Mechanical Engineering) ಎಂಬುದು ಯಂತ್ರಗಳ ವಿನ್ಯಾಸ, ಉತ್ಪಾದನೆ ಮತ್ತು ಕಾರ್ಯಾಚರಣೆಯನ್ನು ಒಳಗೊಂಡ ಒಂದು ಮೂಲಭೂತ ಎಂಜಿನಿಯರಿಂಗ್ ಶಾಖೆಯಾಗಿದೆ. ಈ ಕೋರ್ಸ್ ಥರ್ಮೋಡೈನಾಮಿಕ್ಸ್, ದ್ರವ ಯಂತ್ರಶಾಸ್ತ್ರ, ಮೆಟೀರಿಯಲ್ ಸೈನ್ಸ್ ಮತ್ತು ಉತ್ಪಾದನಾ ಪ್ರಕ್ರಿಯೆಗಳಂತಹ ವಿಷಯಗಳ ಮೇಲೆ ಕೇಂದ್ರೀಕರಿಸುತ್ತದೆ. ಮೆಕ್ಯಾನಿಕಲ್ ಎಂಜಿನಿಯರಿಂಗ್ ಅತ್ಯಂತ ಬೇಡಿಕೆಯ ಎಂಜಿನಿಯರಿಂಗ್ ವಿಶೇಷತೆಗಳಲ್ಲಿ ಒಂದಾಗಿದೆ, ಯಾಂತ್ರಿಕ ಉಪಕರಣಗಳು ಮತ್ತು ಯಂತ್ರೋಪಕರಣಗಳ ಯೋಜನೆ, ವಿಶ್ಲೇಷಣೆ, ಅಭಿವೃದ್ಧಿ ಮತ್ತು ನಿರ್ವಹಣೆಯ ಮೇಲೆ ಬಲವಾದ ಗಮನವನ್ನು ಹೊಂದಿದೆ. ತರಗತಿಯಲ್ಲಿ ಒಳಗೊಂಡಿರುವ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪಠ್ಯಕ್ರಮವು ವಿದ್ಯಾರ್ಥಿಗಳಿಗೆ ಉತ್ಪಾದನಾ ಪ್ರಕ್ರಿಯೆಗಳು, ಉತ್ಪಾದನಾ ವ್ಯವಸ್ಥೆಗಳು, ಪೂರೈಕೆ ಸರಪಳಿ ನಿರ್ವಹಣಾ ವಿಧಾನಗಳು, ವಸ್ತುಗಳ ಗುಣಲಕ್ಷಣಗಳು, ಎಂಜಿನಿಯರಿಂಗ್ ಭೌತಶಾಸ್ತ್ರದ ತತ್ವಗಳು, ಯಂತ್ರಶಾಸ್ತ್ರ ಇತ್ಯಾದಿಗಳ ಬಗ್ಗೆ ವಿವರವಾದ ಜ್ಞಾನವನ್ನು ಒದಗಿಸುತ್ತದೆ . ಇದು ಆಟೋಮೊಬೈಲ್, ರೊಬೊಟಿಕ್ಸ್ ಮತ್ತು ಎಚ್‌ವಿಎಸಿ (HVAC) ಉದ್ಯಮಗಳಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಒದಗಿಸುತ್ತದೆ. ಮೆಕ್ಯಾನಿಕಲ್ ಎಂಜಿನಿಯರಿಂಗ್ ಕೋರ್ಸ್ ವಿವರಗಳು: ಕೋರ್ಸ್ ಪ್ರಕಾರ: ಬಿ.ಇ/ಬಿ.ಟೆಕ್ (4 ವರ್ಷಗಳು), ಡಿಪ್ಲೊಮಾ (3 ವರ್ಷಗಳು), ಎಂ.ಇ/ಎಂ.ಟೆಕ್ (2 ವರ್ಷಗಳು). ಪ್ರಮುಖ ವಿಷಯಗಳು: ಥರ್ಮೋಡೈನಾಮಿಕ್ಸ್ (ಶಾಖ ಮತ್ತು ಶಕ್ತಿ), ದ್ರವ ಯಂತ್ರಶಾಸ್ತ್ರ (Fluid Mechanics), ಯಂತ್ರ ವಿನ್ಯಾಸ (Machine Design), ಉತ್ಪಾದನಾ ಪ್ರಕ್ರಿಯೆಗಳು (Manufacturing Processes), ಮತ್ತು ಮೆಟೀರಿಯಲ್ ಸೈನ್ಸ್. ಕೌಶಲ್ಯಗಳು: ಅಂಆ ಸಾಫ್ಟ್‌ವೇರ್, ರೊಬೊಟಿಕ್ಸ್ ಮತ್ತು ಆಟೊಮೇಷನ್, ಮತ್ತು ಯಂತ್ರಗಳ ಡೈನಾಮಿಕ್ಸ್. ಉದ್ಯೋಗಾವಕಾಶಗಳು: ಆಟೋಮೊಬೈಲ್ ಇಂಜಿನಿಯರ್, ಉತ್ಪಾದನಾ ವ್ಯವಸ್ಥಾಪಕ, ವಿನ್ಯಾಸ ಇಂಜಿನಿಯರ್, ಮತ್ತು ಥರ್ಮಲ್ ಪವರ್ ಪ್ಲಾಂಟ್ ಇಂಜಿನಿಯರ್. ಅರ್ಹತೆ: ವಿಜ್ಞಾನ ವಿಭಾಗದಲ್ಲಿ (PCM) ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆ.

ಅಧಿಕ ಉಷ್ಣಾಂಶ ದಾಖಲಾಗುವ ಸಾಧ್ಯತೆ: ಆರೋಗ್ಯ ಕಾಪಾಡಲು ಜಿಲ್ಲಾಧಿಕಾರಿ ನಿತೀಶ್ ಕೆ. ಸಾರ್ವಜನಿಕರಲ್ಲಿ ಮನವಿ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಭಾರತೀಯ ಹವಾಮಾನ ಇಲಾಖೆಯ ವರದಿಯ ಪ್ರಕಾರ ಮುಂದಿನ ದಿನಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಅಧಿಕ ಉಷ್ಣಾಂಶ ದಾಖಲಾಗುವ ಸಾಧ್ಯತೆಯಿದ್ದು, ಬಿಸಿ ಗಾಳಿ (ಹೀಟ್ ವೇವ್) ಎಚ್ಚರಿಕೆ ನೀಡಲಾಗಿದೆ. ಹೀಟ್ ವೇವ್ ಸ್ಟ್ರೋಕ್ ನಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮನವಿ ಮಾಡುತ್ತಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ಸಾರ್ವಜನಿಕರು ಏನು ಮಾಡಬೇಕು: ಸಾರ್ವಜನಿಕರು ರೇಡಿಯೋ, ಟಿವಿ, ದಿನ ಪತ್ರಿಕೆಗಳಲ್ಲಿ ಬಿಸಿಲಿನ ತಾಪಮಾನದ ಕುರಿತು ಮುನ್ಸೂಚನೆಗಳನ್ನು ಪಡೆದುಕೊಳ್ಳಬೇಕು. ಬಾಯಾರಿಕೆಯಿಲ್ಲದಿದ್ದರೂ ಸಾಧ್ಯವಾದಷ್ಟು ಹೆಚ್ಚಾಗಿ ನೀರನ್ನು ಕುಡಿಯಬೇಕು. ತೆಳುವಾದ ಸಡಿಲವಾದ ಹತ್ತಿಯ ಉಡುಪುಗಳನ್ನು ಧರಿಸಬೇಕು. ಆದಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ

ಒಳ್ಳೆಯದು. ಬಿಸಿಲಿನಲ್ಲಿ ಹೊರಗೆ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಟೋಪಿ, ಬೂಟುಗಳು ಅಥವಾ ಚಪ್ಪಲಗಳನ್ನು ಬಳಸಬೇಕು. ದೂರದ ಪ್ರಯಾಣವನ್ನು ರಾತ್ರಿ ವೇಳೆ ಮಾಡುವುದು ಉತ್ತಮ, ಒಂದು ವೇಳೆ ಪ್ರಯಾಣ ಮಾಡುವ ಸಂದರ್ಭ ಬಂದರೆ ಪ್ರಯಾಣ ಮಾಡುವಾಗ ನಿಮ್ಮೊಂದಿಗೆ ನೀರನ್ನು ತೆಗೆದುಕೊಂಡು ಹೋಗುವುದು. ನೀವು ಹೊರಗೆ ಕೆಲಸ ಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿಯನ್ನು ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಸಹ ಬಳಸಬೇಕು. ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ, ಶರಬತ್, ನಿಂಬೆ ನೀರು, ಮಜ್ಜಿಗೆ ಇತ್ಯಾದಿಗಳನ್ನು ಬಳಸಿ ಅದು ದೇಹವನ್ನು ಪುನಃ ತಂಪಾಗಿಡಲು ಸಹಾಯ ಮಾಡುತ್ತದೆ.

ಪ್ರಾಣಿ/ಪಕ್ಷಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಬೇಕು. ಆದಷ್ಟು ಫ್ಯಾನಗಳನ್ನು ಬಳಸಿ, ಒದ್ದೆಯಾದ ಬಟ್ಟೆಗಳನ್ನು ಮತ್ತು ಆಗಾಗ್ಗೆ ತಣ್ಣೀರಿನಲ್ಲಿ ಸ್ನಾನ ಮಾಡಿ. ಕೆಲಸದ ಸಮಯವನ್ನು ಆದಷ್ಟು ತಂಪಾದ ಸಮಯದಲ್ಲಿ ಮಾಡುವುದು ಹಾಗೂ ಕೆಲಸದ ಸ್ಥಳದ ಬಳಿ ತಂಪಾದ ಕುಡಿಯುವ ನೀರನ್ನು ಒದಗಿಸಬೇಕು. ಕೆಲಸ ನಿರ್ವಹಿಸುವ ಗರ್ಭಿಣಿ ಮಹಿಳೆಯರು ಮತ್ತು ಅನಾರೋಗ್ಯದಲ್ಲಿರುವ ಕಾರ್ಮಿಕರಿಗೆ ಹೆಚ್ಚಿನ ಗಮನ ನೀಡಬೇಕು. ಕಲ್ಲಂಗಡಿ, ಕರಬೂಜ, ಕಿತ್ತಳೆ ದ್ರಾಕ್ಷಿ, ಅನನಾಸ್, ಸೌತೆಕಾಯಿ, ಎಳನೀರನ್ನು ಹೆಚ್ಚಾಗಿ ಸೇವಿಸಬೇಕು.

ನವಜಾತ ಶಿಶುಗಳು, ಹಿರಿಯ ನಾಗರಿಕರು ಹಾಗೂ ಚಿಕ್ಕ ಮಕ್ಕಳು, ಗರ್ಭಿಣಿಯರು, ಹೊರಾಂಗಣದಲ್ಲಿ ಕೆಲಸ ನಿರ್ವಹಿಸುವವರು, ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರು ಹಾಗೂ ಇತರ ಆರೋಗ್ಯ ಸಮಸ್ಯೆಗಳಿರುವವರು, ಅದರಲ್ಲೂ ವಿಶೇಷವಾಗಿ ಹೃದ್ರೋಗ ಹಾಗೂ ರಕ್ತದ ಒತ್ತಡದಿಂದ ಬಳಲುತ್ತಿರುವವರು ಹೆಚ್ಚು ಜಾಗರೂಕತೆ ವಹಿಸಬೇಕು. ಸಾರ್ವಜನಿಕರು ಏನು ಮಾಡಬಾರದು: ಮಕ್ಕಳು ಅಥವಾ ಸಾಕುಪ್ರಾಣಿಗಳನ್ನು ಬಿಸಿಲಿನಲ್ಲಿ ನಿಲ್ಲಿಸಿದ ವಾಹನಗಳ ಹತ್ತಿರ ಬಿಡಬೇಡಿ. ವಾಹನಗಳ ಒಳಾಂಗಣದಲ್ಲಿನ ಹೆಚ್ಚಿನ ತಾಪಮಾನವು ಅವರಿಗೆ/ಅವುಗಳಿಗೆ ಅಪಾಯಕಾರಿಯಾಗಬಹುದು.

ಕಪ್ಪು ಬಟ್ಟೆ ಅಥವಾ ಬಿಗಿಯಾದ ಬಟ್ಟೆಗಳನ್ನು ಧರಿಸುವುದನ್ನು ತಪ್ಪಿಸಿ. ಹೊರಗಿನ ತಾಪಮಾನ ಹೆಚ್ಚಾದಾಗ ಶ್ರಮದಾಯಕ ಚಟುವಟಿಕೆಗಳನ್ನು ತಪ್ಪಿಸಿ. ಅಲ್ಲದೆ ಮಧ್ಯಾಹ್ನ 12 ರಿಂದ 3 ರವರೆಗೆ ಹೊರಗೆ ಕೆಲಸ ಮಾಡುವುದನ್ನು ತಪ್ಪಿಸಿ. ಬಿಸಿಲಿನ ಸಮಯದಲ್ಲಿ ಅಡುಗೆ ಮಾಡುವುದನ್ನು ತಪ್ಪಿಸಬೇಕು. ಅಡುಗೆ ಪ್ರದೇಶವನ್ನು ಸಮರ್ಪಕವಾಗಿ ಗಾಳಿಯಾಡಲು ಬಾಗಿಲು ಮತ್ತು ಕಿಟಕಿಗಳನ್ನು ತೆರೆಯಿರಿ. ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಹಾನಿಕಾರಕ ಪಾನೀಯಗಳನ್ನು ಸೇವಿಸಬೇಡಿ. ಇವು ಹೊಟ್ಟೆ ನೋವನ್ನು ಉಂಟು ಮಾಡುತ್ತದೆ. ಹಾನಿಕಾರಕವಾದ ಆಹಾರ ಮತ್ತು ಹಳಸಿದ ಆಹಾರವನ್ನು ಸೇವಿಸಬಾರದು ಅಲ್ಲದೆ ಚಪ್ಪಲಿ ಧರಿಸದೆ ಹೊರಹೋಗುವ ಅಭ್ಯಾಸವನ್ನು ತಪ್ಪಿಸಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ನೀರಿನ ಅರವಟಿಗೆ ಉದ್ಘಾಟನೆ: ನಿಸರ್ಗ ಗೆಳೆಯರ ಬಳಗದ ಸಮಾಜಮುಖಿ ಕಾರ್ಯ

ನೈಜ್ಯ ದೆಸೆ ನ್ಯೂಸ್

ಮುದ್ದೇಬಿಹಾಳ: ಬೇಸಿಗೆ ಕಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತಂಪು ಕುಡಿಯುವ ನೀರು ಲಭ್ಯವಾಗುವಂತೆ ಮಾಡಲು ನಿಸರ್ಗ ಗೆಳೆಯರ ಬಳಗ, ಮುದ್ದೇಬಿಹಾಳ ವತಿಯಿಂದ ಪಟ್ಟಣದ ಹುಡ್ಕೋ ಕಾಲೋನಿಯ ಮುಖ್ಯ ದ್ವಾರದಲ್ಲಿರುವ ಚನ್ನಮ್ಮ ಸರ್ಕಲ್ ಬಳಿ ಸಾರ್ವಜನಿಕ ನೀರಿನ ಅರವಟಿಗೆಯನ್ನು ಶನಿವಾರ ಉದ್ಘಾಟಿಸಲಾಯಿತು.

ಬೇಸಿಗೆಯ ತೀವ್ರ ಉಷ್ಣತೆಯಲ್ಲಿ ಪ್ರಯಾಣಿಕರು, ಕೂಲಿ ಕಾರ್ಮಿಕರು ಹಾಗೂ ಸಾಮಾನ್ಯ ಜನರು ನೀರಿನ ತೊಂದರೆ ಅನುಭವಿಸದಂತೆ ಮಾಡುವ ಉದ್ದೇಶದಿಂದ ಈ ಅರವಟಿಗೆಯನ್ನು ಸ್ಥಾಪಿಸಲಾಗಿದೆ. ಸಮಾಜಮುಖಿ ಚಟುವಟಿಕೆಗಳಲ್ಲಿ ಸದಾ ಮುಂಚೂಣಿಯಲ್ಲಿರುವ ನಿಸರ್ಗ ಗೆಳೆಯರ ಬಳಗವು ಪರಿಸರ ಸಂರಕ್ಷಣೆ, ಸಾರ್ವಜನಿಕ ಸೇವೆ ಹಾಗೂ ಮಾನವೀಯ ಕಾರ್ಯಗಳಲ್ಲಿ ತೊಡಗಿಸಿಕೊಂಡು ಸಮಾಜಕ್ಕೆ ಮಾದರಿಯಾಗಿದೆ. ಈ ಅರವಟಿಗೆಯ ಮೂಲಕ ಪ್ರತಿದಿನವೂ ಸಾರ್ವಜನಿಕರಿಗೆ ಉಚಿತವಾಗಿ ಶುದ್ಧ ಕುಡಿಯುವ ನೀರನ್ನು ನೀಡುವ ವ್ಯವಸ್ಥೆ ಮಾಡಲಾಗಿದೆ. ಜನ ಸಂಚಾರ ಹೆಚ್ಚಿರುವ ಚನ್ನಮ್ಮ ಸರ್ಕಲ್ ಪ್ರದೇಶದಲ್ಲಿ ಈ ವ್ಯವಸ್ಥೆ ಜನರಿಗೆ ಹೆಚ್ಚು ಉಪಯೋಗವಾಗಲಿದೆ ಎಂದು ಸಂಘಟನೆಯ ಸದಸ್ಯರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಹಾಂತೇಶ ಬೂದಿಹಾಳಮಠ, ಅನಿಲ ತಾರನಾಳ, ಬಸವರಾಜ ನಾಗೂರ, ಮುತ್ತು ಕಂಠಿ, ಪ್ರಭು ನಂದಪ್ಪನವರ, ರಿಯಾಜ ನಾಯ್ಕೊಡಿ, ಅಬ್ದುಲ್ ಗಂಗೂರ, ಶಿವು ಕಂಚ್ಯಾಣಿ, ಶಂಕರ ಸಾಲಿಮಠ, ಮೋನೇಶ ಪತ್ತಾರ, ಶಿವರಾಜ ಹಡಪದ, ಬಂದು ಮೋಮಿನ, ಮೋದಿನ ಕಾರಗನೂರ, ಮಂಜುನಾಥ ಕಬಾಡೆ, ಅನಿಲ ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಬೇಸಿಗೆಯಲ್ಲಿ ಸಾರ್ವಜನಿಕರಿಗೆ ತಂಪು ನೀರು ಒದಗಿಸುವ ಈ ರೀತಿಯ ಸಮಾಜಮುಖಿ ಕಾರ್ಯಗಳು ಮಾನವೀಯತೆಯ ಸಂದೇಶವನ್ನು ಸಾರುತ್ತವೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟರು.

ಜಮೀನು ಒದಗಿಸಿದರೆ ಸಿಂಧನೂರಲ್ಲಿ ಜವಳಿ ಪಾರ್ಕ್

ನೈಜ್ಯ ದೆಸೆ ನ್ಯೂಸ್

ರಾಯಚೂರು: ಕೇಂದ್ರ ಸರ್ಕಾರದ ಅಧೀನದಲ್ಲಿ ಸುಮಾರು 7,500 ಎಕರೆ ಭೂಮಿ ಇದ್ದು, ಇದರಲ್ಲಿ 15 ಎಕರೆಯನ್ನು ಜವಳಿ ಇಲಾಖೆಗೆ ಮಂಜೂರು ಮಾಡಿದರೆ ಸಿಂಧನೂರಲ್ಲಿ ಜವಳಿ ಪಾರ್ಕ್ ಸ್ಥಾಪನೆ ಬೇಡಿಕೆಯನ್ನು ಪರಿಶೀಲಿಸಲಾಗುವುದು ಎಂದು ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು ತಿಳಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಮಂಗಳವಾರ ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಬಸನಗೌಡ ಬಾದರ್ಲಿ ಅವರ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, ಜವಳಿ ಪಾರ್ಕ್ ಸ್ಥಾಪನೆಗೆ 15 ಎಕರೆ ಭೂಮಿ ಗುರುತಿಸಿ ಇಲಾಖೆಗೆ ಹಸ್ತಾಂತರಿಸಲು ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ. ಆದರೆ, ಒಂದೇ ಕಡೆ 15 ಎಕರೆ ಸರ್ಕಾರದ ಭೂಮಿ ಲಭ್ಯ ಇಲ್ಲ ಎಂದು ತಿಳಿಸಿದ್ದಾರೆ. ಉದ್ಯೋಗ ಅರಸಿ ಸಿಂಧನೂರು ತಾಲೂಕಿನ ಯುವಕ ಯುವತಿಯರು ರಾಜ್ಯದ ವಿವಿಧ ಸ್ಥಳಗಳಿಗೆ ವಲಸೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಜವಳಿ ಪಾರ್ಕ್ ಸ್ಥಾಪನೆ ಮಾಡಿದರೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗಲಿದೆ. ಆದರೆ, ಜವಳಿ ಪಾರ್ಕ್ ನಿರ್ಮಿಸಲು ಅಗತ್ಯ ಪ್ರಮಾಣದ ಸರ್ಕಾರದ ಭೂಮಿ ಸಿಂಧನೂರು ತಾಲೂಕಿನಲ್ಲಿ ಇಲ್ಲ. ಕೇಂದ್ರ ಸರ್ಕಾರದ ಭೂಮಿ ಲಭ್ಯವಿದ್ದು, ಈ ಭೂಮಿಯನ್ನು ಜವಳಿ ಪಾರ್ಕ್ ಸ್ಥಾಪನೆಗೆ ಒದಗಿಸುವಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಪತ್ರ ಬರೆಯಲಿದೆ. ಕೇಂದ್ರ ಸರ್ಕಾರ ಭೂಮಿ ಒದಗಿಸಿದರೆ ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ಸ್ಥಾಪನೆ ಬೇಡಿಕೆಯನ್ನು ಪರಿಶೀಲಿಸಲಾಗುವುದು ಎಂದು ಸಚಿವರಾದ ಶಿವಾನಂದ ಪಾಟೀಲ ಅವರು ತಿಳಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಅನುದಾನರಹಿತ ಶಾಲೆಗಳಿಗೆ ಸರ್ಕಾರದ 'ಅಗ್ನಿಪರೀಕ್ಷೆ'–ಆರ್.ಟಿ.ಇ ಬಾಕಿ ಕೊಡದ ಸರ್ಕಾರದಿಂದ ಪಠ್ಯಪುಸ್ತಕಕ್ಕೆ ಮುಂಗಡ ಹಣದ ಪೀಡನೆ!

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಒಂದು ಕಡೆ ಬರಬೇಕಾದ ಆರ್ ಟಿ ಇ ಶುಲ್ಕ ಮರುಪಾವತಿ ಹಣಕ್ಕಾಗಿ ಅಲೆಯುತ್ತಿರುವ ಖಾಸಗಿ ಶಾಲೆಗಳು, ಇನ್ನೊಂದು ಕಡೆ 'ಇಂದೇ ಹಣ ಕಟ್ಟಿ, ಇಲ್ಲದಿದ್ದರೆ ಪುಸ್ತಕವಿಲ್ಲ' ಎಂಬ ಸರ್ಕಾರದ ಖಡಕ್ ಎಚ್ಚರಿಕೆ! ಇದು ರಾಜ್ಯ ಪಠ್ಯಕ್ರಮದ ಅನುದಾನರಹಿತ ಶಾಲೆಗಳು ಇಂದು ಎದುರಿಸುತ್ತಿರುವ ಧರ್ಮಸಂಕಟ.

ಬಾಕಿ ಉಳಿದ ಕೋಟಿ ಕೋಟಿ ಹಣ: ಕಳೆದ ಸಾಲಿನ ಹಾಗೂ ಪ್ರಸಕ್ತ ಸಾಲಿನ ಆರ್.ಟಿ.ಇ (RTE) ಶುಲ್ಕ ಮರುಪಾವತಿ ಹಣವನ್ನು ಸರ್ಕಾರ ಇದುವರೆಗೂ ಬಹುತೇಕ ಶಾಲೆಗಳಿಗೆ ಬಿಡುಗಡೆ ಮಾಡಿಲ್ಲ. ಗ್ರಾಮೀಣ ಭಾಗದ ಸಣ್ಣ ಶಾಲೆಗಳು ಶಿಕ್ಷಕರ ಸಂಬಳ ಮತ್ತು ಕಟ್ಟಡದ ಬಾಡಿಗೆ ಕಟ್ಟಲು ಪರದಾಡುತ್ತಿವೆ. ಇಂತಹ ಸಂಕಷ್ಟದ ಸಮಯದಲ್ಲಿ, 2026–27ನೇ ಸಾಲಿನ ಪಠ್ಯಪುಸ್ತಕಗಳ ಒಟ್ಟು ಮೊತ್ತದ ಶೇಕಡಾ 25ರಷ್ಟು ಮುಂಗಡ ಹಣವನ್ನು ಇಂದೇ (ದಿನಾಂಕ 10-03-2026) 2 ಗಂಟೆಯೊಳಗೆ ಆದೇಶ (ವಾಟ್ಸಪ್ ಸಂದೇಶ)ನೀಡಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ.

ಕೇಂದ್ರೀಯ ಪಠ್ಯಕ್ರಮಕ್ಕೊಂದು ನ್ಯಾಯ, ರಾಜ್ಯ ಪಠ್ಯಕ್ರಮಕ್ಕೊಂದು ನ್ಯಾಯ ಕೇಂದ್ರೀಯ ಪಠ್ಯಕ್ರಮದ (CBSE/ICSE) ಶಾಲೆಗಳಿಗೆ ಮುಕ್ತ ಗುಣಮಟ್ಟದ ಪುಸ್ತಕಗಳನ್ನು ಖರೀದಿಸಲು ಅವಕಾಶವಿದೆ. ಆದರೆ ರಾಜ್ಯ ಪಠ್ಯಕ್ರಮದ ಶಾಲೆಗಳನ್ನು ಕೇವಲ ಸರ್ಕಾರಿ ಪೂರೈಕೆಯ ಮೇಲೆ ಅವಲಂಬಿತವಾಗುವಂತೆ ಮಾಡಿ, ಈಗ ಮುಂಗಡ ಹಣಕ್ಕಾಗಿ ಒತ್ತಾಯಿಸುತ್ತಿರುವುದು ಅತ್ಯಂತ ದುರದೃಷ್ಟಕರ. ಇದು ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ನಡೆಸುತ್ತಿರುವ ವ್ಯವಸ್ಥಿತ ಆರ್ಥಿಕ ಕಿರುಕುಳವಾಗಿದೆ. "ಇದು ಶಿಕ್ಷಣ ಸಂಸ್ಥೆಗಳ ಶೋಷಣೆ" ಈ ಕುರಿತು ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಹಿರಿಯ ನ್ಯಾಯವಾದಿಗಳು ಹಾಗೂ ರಾಯಚೂರು ಜಿಲ್ಲೆಯ ವಿವಿಧ ಖಾಸಗಿ



ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳಾದ ನಾಗರಾಜ ಮಸ್ಕಿ ಅವರು, ಸರ್ಕಾರದ ಈ ದ್ವಂದ್ವವನ್ನು ಪ್ರಶ್ನಿಸಿದ್ದಾರೆ. "ಸರ್ಕಾರವು ಶಾಲೆಗಳಿಗೆ ನೀಡಬೇಕಾದ ಆರ್.ಟಿ.ಇ ಬಾಕಿ ಹಣವನ್ನು ನೀಡದೆ, ಮುಂಗಡವಾಗಿ ಹಣ ತುಂಬಲು ಸೂಚಿಸಲಾಗಿದೆ. ಇಂದೇ ಹಣ ಇಲ್ಲವಾದರೆ ಪುಸ್ತಕಗಳನ್ನು ಮುದ್ರಿಸುವುದಿಲ್ಲ ಎಂಬ ಬೆದರಿಕೆ ತಂತ್ರವು ಸರಿಯಲ್ಲ. ಸರ್ಕಾರ ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕು ತಕ್ಷಣವೇ ಬಾಕಿ ಇರುವ ಆರ್.ಟಿ.ಇ ಬಿಡುಗಡೆ ಮಾಡಬೇಕು ತದನಂತರ ಹಣ ಪಾವತಿಗೆ ಅವಕಾಶ ನೀಡಬೇಕು. ರಾಜ್ಯ ಪಠ್ಯಕ್ರಮಗಳ ಶಾಲೆಗಳಿಗೂ ಕೂಡ ಕೇಂದ್ರೀಯ ಪಠ್ಯಕ್ರಮದಂತೆ ಪುಸ್ತಕಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಅವಕಾಶ ಮಾಡಿಕೊಡಬೇಕು ,"ಎಂದು ಅವರು ಹೇಳಿದ್ದಾರೆ.

ಒಕ್ಕೂಟವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ, ಕೂಡಲೇ ಸರ್ಕಾರವು ಪುಸ್ತಕಗಳ ಮುಂಗಡ ಪಾವತಿಯ ಅವಧಿಯನ್ನು ವಿಸ್ತರಿಸಬೇಕು ಮತ್ತು ರಾಜ್ಯ ಪಠ್ಯಕ್ರಮದ ಪುಸ್ತಕಗಳನ್ನು ಕೇಂದ್ರೀಯ ಪಠ್ಯಕ್ರಮದಂತೆ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಬೇಕು. ಬಾಕಿ ಇರುವ ಆರ್.ಟಿ.ಇ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು

ನಾಗರಾಜ ಮಸ್ಕಿ
ಹಿರಿಯ ನ್ಯಾಯವಾದಿಗಳು ಹಾಗೂ ಪ್ರಧಾನ ಕಾರ್ಯದರ್ಶಿಗಳು, ರಾಯಚೂರು ಜಿಲ್ಲೆ ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ರಿ).

ಮುಂದೆನು ಸರ್ಕಾರದ ಈ ಹಠಮಾರಿ ಧೋರಣೆಯಿಂದಾಗಿ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಮತ್ತು ನೂರಾರು ಶಾಲೆಗಳ ಅಸ್ತಿತ್ವಕ್ಕೆ ಧಕ್ಕೆ ಬರುವ ಸಾಧ್ಯತೆ ಇದೆ . ಕೂಡಲೇ ಶಿಕ್ಷಣ ಇಲಾಖೆಯು ಈ ಗಡುವನ್ನು ವಿಸ್ತರಿಸಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯಲ್ಲಿ ಸಾಕಷ್ಟು ಕೊಡುಗೆ ನೀಡಿರುವ ಹಾಗೂ ಆರ್ಥಿಕ ಸಂಕಷ್ಟದಲ್ಲಿರುವ ಶಾಲೆಗಳಿಗೆ ನೆರವಾಗಬೇಕು ಎಂದು ಸಾರ್ವಜನಿಕರ ಒತ್ತಾಯವಾಗಿದೆ.

ಮಹಿಳೆಯರು ಸ್ವಾಭಿಮಾನಿಗಳಾಗುತ್ತಿರುವುದು ವಿಶೇಷ: ಡಾ.ನಂದಿತಾ ಎಮ್.ಎನ್

ನೈಜ್ಯ ದೆಸೆ ನ್ಯೂಸ್

ರಾಯಚೂರು: ಈ ಹಿಂದೆ ಕೇವಲ ಮನೆಗಷ್ಟೇ ಸೀಮಿತವಾಗಿದ್ದ ಮಹಿಳೆಯು ಇದೀಗ ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಗೆ ಬಂದು ತನ್ನ ಸಾಮರ್ಥ್ಯ ಪ್ರದರ್ಶಿಸುತ್ತಿದ್ದಾಳೆ. ಇದು ಮಹಿಳಾ ಸ್ವಾಭಿಮಾನ ಮತ್ತು ಸಬಲೀಕರಣಕ್ಕೆ ಸಾಕ್ಷಿಯಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ.ನಂದಿತಾ ಎಮ್.ಎನ್. ಅವರು ಹೇಳಿದರು.

ಮಾರ್ಚ್ 09ರ ಸೋಮವಾರ ದಂದು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ರಂಗೋಲಿ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು. ಶಿಕ್ಷಣ, ರಾಜಕೀಯ, ಶೈಕ್ಷಣಿಕ, ವಿಜ್ಞಾನ, ಸಾಂಸ್ಕೃತಿಕ, ಕ್ರೀಡೆ ಸೇರಿದಂತೆ ಪ್ರತಿಯೊಂದು ಕ್ಷೇತ್ರಗಳಲ್ಲೂ ಮಹಿಳೆ ತನ್ನದೇ ಆದ ಛಾಪು ಮೂಡಿಸಿದ್ದಾಳೆ. ಅಂತಾರಾಷ್ಟ್ರೀಯ ಮಹಿಳಾ ದಿನದ ನಿಮಿತ್ತ ಹಮ್ಮಿಕೊಂಡ ರಂಗೋಲಿ ಸ್ಪರ್ಧೆಯು ಹೆಣ್ಣಿನ ಸಾಮರ್ಥ್ಯಕ್ಕೆ ಕನ್ನಡಿ ಹಿಡಿದಿದೆ ಎಂದರು.

ಮಹಿಳಾ ದಿನಾಚರಣೆಯು ಹೆಣ್ಣು ಮಕ್ಕಳ ಅಸ್ತಿತ್ವ, ಗುರಿ ಸಾಧನೆಯನ್ನು ಜಗದೆಲ್ಲಡೆ ಪಸರಿಸುವ ಮಹತ್ವದ ದಿನವಾಗಿದ್ದು, ಇಡೀ ಮಾರ್ಚ್ ತಿಂಗಳು ಮಹಿಳೆಯರ ಕಾರ್ಯ ಚಟುವಟಿಕೆಗಳನ್ನು ಗುರುತಿಸುವ ಕಾರ್ಯ ನಿರಂತರವಾಗಿ ನಡೆಯುವುದು.

ಹೆಣ್ಣು ತಾಯಿಯಾಗಿ, ಸಹೋದರಿಯಾಗಿ, ಸ್ನೇಹಿತೆಯಾಗಿ, ಪತ್ನಿಯಾಗಿ, ಮಗಳಾಗಿ ತನ್ನದೇ ಆದ ಪಾತ್ರಗಳನ್ನು ನಿಭಾಯಿಸುತ್ತಾಳೆ ಎಂದರು. ಬಹುಬಣ್ಣದ ರಂಗೋಲಿ ಚಿತ್ತಾರ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕೃಷ್ಣ ಸಭಾಂಗಣದಲ್ಲಿ ಇಲಾಖೆಯ ಮಹಿಳಾ ಸಿಬ್ಬಂದಿಯಿಂದ ನಡೆದ ರಂಗೋಲಿ ಸ್ಪರ್ಧೆಯು ಸ್ತ್ರೀ ಶಕ್ತಿಯನ್ನು ಪ್ರತಿಬಿಂಬಿಸುವಂತಿತ್ತು. ಭ್ರೂಣದ ಹಂತದಿಂದಲೇ ಹೆಣ್ಣಿನ ಕಾಳಜಿ ಮಾಡಿದಲ್ಲಿ ಮಹಿಳೆಯು ಕೇವಲ ತನಗಾಗಿಯಲ್ಲ, ಸಮಾಜಕ್ಕೆ, ದೇಶಕ್ಕೆ ಕೊಡುಗೆಗಳನ್ನು ನೀಡುವ ಅದ್ಭುತ ಸಾಧಕಿಯಾಗುತ್ತಾಳೆ ಎಂಬುದನ್ನು ನಾಗರತ್ನ ಅವರ ರಂಗೋಲಿ ಸಂದೇಶ ನೀಡಿತು. ಯಾವುದೇ ವೃತ್ತಿಪರ ಕಲಾವಿದರಿಗೆ ಕಡಿಮೆ ಇಲ್ಲದಂತೆ ಧೈರ್ಯದಿಂದ ಮುಖ ಭಾವನೆಯೊಂದಿಗೆ ಹೆಣ್ಣಿನ ಜೀವನದ ಕನಸುಗಳಿಗೆ ಬಣ್ಣ ತುಂಬಿ ಎಂಬ ಕನಸಿನ ಸಂದೇಶವನ್ನು

ಸುವರ್ಣ ಅವರ ರಂಗೋಲಿ ತಿಳಿಸಿತು.

ಮಹಿಳೆಯು ತನ್ನ ಆಲೋಚನೆಗಳನ್ನು ಕೃತಿರೂಪಕ್ಕೆ ಇಳಿಸಿ, ದೃಢ ವಿಶ್ವಾಸ, ಸಹನೆ, ಪ್ರಾಮಾಣಿಕತೆ, ಧೈರ್ಯ, ಮಮತೆ, ತಾಯ್ತನವನ್ನು ಪ್ರಕೃತಿಯ ರೂಪದಲ್ಲಿ ಕೊಂಡೊಯ್ಯುವ ಪ್ರಯತ್ನ ಮಾಡುವ ಅರ್ಥವನ್ನು ಶಾಲಿನಿ ಅವರ ರಂಗೋಲಿ ಹೊರಹೊಮ್ಮಿಸಿತು. ನಾರಿಶಕ್ತಿ ಸಮಾಜದ ಪ್ರಗತಿ ಎಂಬುದನ್ನು ಗ್ರಾಮೀಣ ಸೊಗಡಿನಲ್ಲಿ ತನ್ನ ಮಗುವನ್ನು ಮಮತೆಯ ಸಮುದ್ರದಲ್ಲಿ ತೇಲಿಸುವ ಪರಿಯುಳ್ಳ ಅದ್ಭುತ ಕಲೆಯೊಂದಿಗೆ ಯಾವುದೇ ಜವಾಬ್ದಾರಿ ಪರಿಪೂರ್ಣವಾಗಿಸುವ ಗಟ್ಟಿತನವನ್ನು ತೋರಿಸುವ ಪ್ರಯತ್ನದ ಅರ್ಥವನ್ನು ಗೀತಾ ಅವರು ತಮ್ಮ ರಂಗೋಲಿ ಮೂಲಕ ನೀಡಿದರು.

ಮೇಘನಾ ಅವರು ಬಿಡಿಸಿದ ರಂಗೋಲಿಯು, ಆರೋಗ್ಯಕರ ತಾಯಿಗೆ ಆರೋಗ್ಯವಂತ ಮಗು, ಅದರಲ್ಲೂ ಹೆಣ್ಣು ಮಗು ಪ್ರಕೃತಿಯ ವರದಾನ, ಭ್ರೂಣ ಹತ್ಯೆ ಶಿಕ್ಷಾರ್ಹ ಅಪರಾಧ, ಹೆಣ್ಣುಮಗು ಉಳಿಸಿ, ಬೆಳಿಸಿ ಎಂಬ ಸಂದೇಶವನ್ನು ನೀಡಿತು. ಲಕ್ಷ್ಮೀ ಅವರ ರಂಗೋಲಿಯು ಆರೋಗ್ಯ ಸುರಕ್ಷತೆಯಿಂದ ಸುಂದರ ಬದುಕು ಸಾಧ್ಯ ಎಂದು ಕೈಯಲ್ಲಿ ಹಣತೆಯೊಂದಿಗೆ ಹೆಜ್ಜೆ ಹಾಕುವ ದೃಶ್ಯ ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂಬ ಸಂದೇಶವನ್ನು ನೀಡಿತು. ಈ ವೇಳೆ ತೀರ್ಪುಗಾರರಾದ ಡಾ.ಶೀಲಶ್ರೀ ಅವರು ಮತನಾಡಿ, ಅತ್ಯುತ್ತಮ ರಚನೆ ಎನ್ನುವುದಕ್ಕಿಂತ ಯಾವುದೇ ರೇಖಾಚಿತ್ರ ಬಳಸದೆ ಬಿಡಿಸಿದ ರಂಗೋಲಿಗಳನ್ನು ಅಂತಿಮಗೊಳಿಸಿದ್ದು, ಬಹುಮಾನವನ್ನು ಮುಂದಿನ ದಿನಗಳಲ್ಲಿ ವೇದಿಕೆಯಲ್ಲಿ ಗಣ್ಯರ ಸಮ್ಮುಖದಲ್ಲಿ ನೀಡಲಾಗುವುದೆಂದು ತಿಳಿಸಿದರು.